ಸಂಪುಟ 01 | ಸಂಚಿಕೆ 30 | ಗುರುವಾರ 11 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1ಅಂತರರಾಷ್ಟ್ರೀಯ ಪರ್ವತ ದಿನ (International Mountain Day-UN)** ವಿಶ್ವಸಂಸ್ಥೆಯ ಮೂಲಕ ಘೋಷಿಸಲಾದ ದಿನ.ಪರ್ವತ ಪ್ರದೇಶಗಳ ಪರಿಸರ ಸಂರಕ್ಷಣೆ, ಪರ್ವತ ಜನರ ಜೀವನಮಾನ, ಪರ್ವತ ಸಂಪನ್ಮೂಲಗಳ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವುದು.ಹಿಮಪರ್ವತಗಳು, ಜಲಸಂಪತ್ತು, ಜೈವ ವೈವಿಧ್ಯತೆ, ಪ್ರವಾಸೋದ್ಯಮ ಇವುಗಳ ಮಹತ್ವವನ್ನು ನೆನಪಿಸುವ ದಿನ.ಪ್ರತಿವರ್ಷ ವಿಶೇಷ ಥೀಮ್ ಘೋಷಿಸಲಾಗುತ್ತದೆ (ಉದಾ: ಪರಿಸರ, ಹವಾಮಾನ ಬದಲಾವಣೆ, ಸುಸ್ಥಿರ ಪ್ರವಾಸೋದ್ಯಮ).

**2) ಭಾರತ ? ಗುಣಮಟ್ಟ ದಿನ / ರಾಷ್ಟ್ರೀಯ ಗುಣಮಟ್ಟ ವಾರ (Quality Day / Week ? India)** ಉದ್ಯಮಗಳಲ್ಲಿ, ಸೇವಾ ಕ್ಷೇತ್ರಗಳಲ್ಲಿ, ಉತ್ಪಾದಕತೆಯಲ್ಲಿ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಗುಣಮಟ್ಟ ಮತ್ತು ಪರಿಣಾಮಕಾರಿತ್ವ ಹೆಚ್ಚಿಸಲು ಜಾಗೃತಿ ಮೂಡಿಸಲಾಗುತ್ತದೆ. ತಿಂಗಳ ಮೊದಲ ವಾರವನ್ನು ``National Quality Week" ಆಗಿ ಕೂಡ ಕೆಲವು ಸಂಸ್ಥೆಗಳು ಆಚರಿಸುತ್ತವೆ.

## ಸುಭಾಷಿತ

ನಿನ್ನೆಯಿಂದ ಕಲಿ, ಇಂದಿಗಾಗಿ ಬದುಕು, ನಾಳಿನ ಬಗ್ಗೆ ಭರವಸೆ ಇಡು. ಆದರೆ ಪ್ರಶ್ನಿಸುವುದನ್ನು ಮಾತ್ರ ಎಂದಿಗೂ ಬಿಡಬೇಡ.

-ಅಲ್ ಬರ್ಟ್ ಐನ್ ಸ್ಟೀನ್

## ಧರ್ಮಸ್ಥಳಕ್ಕೆ ಮಸಿ ಬಳಿಯಲು ಷಡ್ಯಂತ್ರ ರೂಪಿಸಿದವರನ್ನು ತಕ್ಷಣವೇ ಜೈಲಿಗಟ್ಟುವಂತೆ ಆರ್.ಅಶೋಕ್ ಒತ್ತಾಯ



ಬೆಳಗಾವಿ,ಡಿ.10-ಶ್ರೀಕ್ಷೇತ್ರ ಧರ್ಮಸ್ಥಳದ ಖ್ಯಾತಿಗೆ ಮಸಿ ಬಳಿಯಲು ಷಡ್ಯಂತ್ರ ರೂಪಿಸಿದ ಆರು ಮಂದಿ ಆರೋಪಿಗಳನ್ನು ರಾಜ್ಯ ಸರ್ಕಾರ ತಕ್ಷಣವೇ ಬಂಧಿಸಿ ಜೈಲಿಗೆ ಅಟ್ಟಬೇಕೆಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣದ ತನಿಖೆ ನಡೆಸಿರುವ ವಿಶೇಷ ತನಿಖಾ ದಳ(ಎಸ್ಐಟಿ) ಇದೀಗ ನ್ಯಾಯಾಲಯಕ್ಕೆ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ಇದರಲ್ಲಿ ಚಿನ್ನಯ್ಯ, ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಜಯಂತ್, ವಿಠಲ್ ಗೌಡ ಹಾಗೂ ಸುಜಾತ ಭಟ್ ಅವರುಗಳೇ ಪ್ರಕರಣದ ಸೂತ್ರಧಾರಿಗಳೆಂದು ಎಸ್ಐಟಿ ಹೇಳಿರುವುದರಿಂದ ಕೂಡಲೇ ಎಲ್ಲರನ್ನು ಬಂಧಿಸಿ ಜೈಲಿಗೆ ಹಾಕಬೇಕೆಂದು ಆಗ್ರಹಿಸಿದರು.

ಇದು ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯುವ ಷಡ್ಯಂತ್ರ ಎಂಬುದು ತನಿಖೆಯಿಂದ ಸಾಬೀತಾಗಿದೆ. ಹಣದ ಆಸೆಗಾಗಿ ಸುಕ್ಷೇತ್ರದ ಹೆಸರು ಬಳಸಿಕೊಂಡು ಸುಳ್ಳು ಆರೋಪ ಮಾಡಿದ್ದಾರೆ. ಹಾಗಾಗಿ ವಿಳಂಬ ಮಾಡದೇ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮನವಿ ಮಾಡಿದರು. ಆರೋಪಿಗಳು ತನಿಖೆಗೆ ಸಹಕಾರ ನೀಡುತ್ತಿಲ್ಲ ಎಂದು ಎಸ್ಐಟಿ ಅವರೇ ಹೇಳಿದ್ದಾರೆ. ಹಣದ ಆಸೆಗಾಗಿ ನಡೆಸಿರುವ ವ್ಯವಸ್ಥಿತ ಹಾಗೂ ಪೂರ್ವ ನಿಯೋಜಿತ ಷಡ್ಯಂತ್ರ ಎಂಬುದು ಸಾಬೀತಾಗಿರುವುದ-ರಿಂದ ಸರ್ಕಾರ ಅವರ ಬಂಧಿಸಲು ಏಕೆ ವಿಳಂಬ ಮಾಡುತ್ತಿದೆ ಎಂದು ಪ್ರಶ್ನಿಸಿದರು.

ನಾವು ಪ್ರಾರಂಭದಿಂದಲೂ ಇದು ವ್ಯವಸ್ಥಿತ ಹುನ್ನಾರ ಮತ್ತು ಷಡ್ಯಂತರ ಎಂದು ಪ್ರತಿಪಾದಿಸುತ್ತಲೇ ಬಂದಿದ್ದೇವೆ. ಇದರ ಹಿಂದೆ ದೊಡ್ಡ ದೊಡ್ಡ ಕಾಣದ ಕೈಗಳಿವೆ. ಇವರಿಗೆ ಎಲ್ಲಿಂದ ಹಣ ಬಂತು? ಇದರ ಹಿಂದಿನ ರೂವಾರಿಗಳಾರು? ಯಾವ ಕಾರಣಕ್ಕಾಗಿ ಈ ಷಡ್ಯಂತ್ರ ರೂಪಿಸಿದ್ದರು? ಎಲ್ಲವೂ ಕೂಡ ಬಟಾಬಯಲಾಗಬೇಕು. ಸರ್ಕಾರ ವಿಳಂಬ ಮಾಡಿದರೆ ನಾವು ಸುಮನಿರುವುದಿಲ್ಲ ಎಂದು ಎಚ್ಚರಿಸಿದರು. ಸದನದಲ್ಲೂ ಈ ವಿಷಯವನ್ನು ಪ್ರಸ್ತಾಪಿಸುತ್ತೇವೆ. ಗೃಹಸಚಿವರು ಇಲ್ಲವೇ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ನಮಗೆ ಸ್ಪಷ್ಟ ಉತ್ತರ ಬೇಕು? ಅಲ್ಲಿಯ ತನಕ ನಮ ಹೋರಾಟ ನಿಲ್ಲುವುದಿಲ್ಲ ಎಂದು ಅಶೋಕ್ ಎಚ್ಚರಿಸಿದರು. ವಿಧಾನಪರಿಷತ್‌ನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಇದು ವ್ಯವಸ್ಥಿತ ಪಿತೂರಿ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ.

ಧರ್ಮಸ್ಥಳದ ಏಳಿಗೆಯನ್ನು ಸಹಿಸಿದವರು ಈ ರೀತಿ ಷಡ್ಯಂತರ ರೂಪಿಸಿದ್ದಾರೆ. ಸರ್ಕಾರ ಸ್ವಲ್ಪವೂ ವಿಳಂಬ ಮಾಡದೇ ಆರೋಪಿಗಳನ್ನು ಬಂಧಿಸಬೇಕು. ಇದೊಂದು ಅಂತಾರಾಷ್ಟ್ರೀಯ ಮಟ್ಟದ ಪಿತೂ-ರಿಯಾಗಿರುವುದರಿಂದ ಧರ್ಮಸ್ಥಳದ ಹೆಸರಿಗೆ ಕೆಲವು ದುಷ್ಟಶಕ್ತಿಗಳು ಹಣದ ಆಮಿಷವೊಡ್ಡಿ ಷಡ್ಯಂತರ ನಡೆಸಿದ್ದಾರೆ. ಹಾಗಾಗಿ ಆರೋಪಿಗಳನ್ನು ವಿಳಂಬ ಮಾಡದೆ ಬಂಧಿಸಬೇಕೆಂದು ಒತ್ತಾಯಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ನಮ ನಿಲುವು ಏನಿತ್ತೋ ಅದು ತನಿಖೆಯಲ್ಲೇ ಕಂಡುಬಂದಿದೆ. ಇದು ಪೂರ್ವ ನಿಯೋಜಿತ ಎಂಬುದರಲ್ಲಿ ಎರಡು ಮಾತಿಲ್ಲ.


## ಕಲ್ಲೂರು ಗ್ರಾಮದಲ್ಲಿ ನಿವೇಶನ ಹಸ್ತಾಂತರ: ಆಕ್ಷೇಪಣೆ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 10 (ಕರ್ನಾಟಕ ವಾರ್ತೆ): ಜಿಲ್ಲೆಯ ಕಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲೂರು ಗ್ರಾಮದ ಸ.ನಂ 350/2 ವಿಸ್ತೀರ್ಣ 1 ಎಕರೆ ಜಮೀನಿನಲ್ಲಿ ವಾಸದ ಉದ್ದೇಶಕ್ಕೆ ಭೂಪರಿವರ್ತನೆಯಾಗಿ ವಿನ್ಯಾಸ ಅನುಮೋದಿತ ಬಡಾವಣೆಯಲ್ಲಿನ ನಾಗರಿಕ ಸೌಲಭ್ಯಕ್ಕಾಗಿ 352 ಚ.ಮೀ ವಿಸ್ತೀರ್ಣದ ನಿವೇಶನವನ್ನು ಕಾಯ್ದಿರಿಸಿದೆ.**

ಈ ನಿವೇಶನವನ್ನು ನಾಡ ಕಾರ್ಯಾಲಯ ಕಲ್ಲೂರು ಇದರ ನೂತನ ಕಟ್ಟಡ ನಿರ್ಮಾಣಕ್ಕೆ ಕಂದಾಯ ಇಲಾಖೆಗೆ ಹಸ್ತಾಂತರಿಸಲು ದಿನಾಂಕ 07-11-2025 ರಂದು ನಡೆದ ಗ್ರಾ.ಪಂ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ 08 ದಿನದೊಳಗಾಗಿ ಸೂಕ್ತ ಸಮಥ-ರ್ನಿಯ ದಾಖಲೆಗಳೊಂದಿಗೆ ಲಿಖಿತವಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ ಎಂದು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ನಿಂದ ಪ್ರತಿಭಟನೆ ಮನವಿ ಸಲ್ಲಿಕೆ




❏ ನೈಜ್ಯ ದೆಸೆ ನ್ಯೂಸ್

**ಹಮಾಲಿ ಕಾರ್ಮಿಕರ ಪ್ರಮುಖ ಏಳು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಬುಧವಾರ ಸಂಘಟನೆ ವತಿಯಿಂದ ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು. ಅಸಂಘಟಿತ ಕಾರ್ಮಿರಲ್ಲಿಯೇ ಅತ್ಯಂತ ಶ್ರಮದಾಯಕ ಕೆಲಸ ನಿರ್ವಹಿಸುವ, ವ್ಯಾಪಾರ ವಹಿವಾಟಿನಲ್ಲಿ ಹಾಗೂ ಸರಕು ಸಾಗಾಣಿಕೆಯಲ್ಲಿ ಮಹತ್ವದ ಪಾತ್ರವಹಿಸುವ ಶ್ರಮಜೀವಿಗಳಾದ ಎಪಿಎಂಸಿ, ಮಿಲ್, ಗೋಡಾನ್, ವೇರಹೌಸ್, ನಗರ ಗ್ರಾಮೀಣ ಬಜಾರ್ ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಬಂದರುಗಳಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಕೆಲಸ ನಿರ್ವಹಿಸುವ ಹಮಾಲಿ ಕಾರ್ಮಿಕರ ಬದುಕಿನ ಪ್ರಮುಖ ಪ್ರಶ್ನೆಗಳಿಗಾಗಿ, ಪ್ರಮುಖ ಬೇಡಿಕೆಗಳಿಗಾಗಿ ಒತ್ತಾಯಿಸಿ ಬುಧವಾರ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಈ ಮನವಿಯನ್ನು ನೀಡಲಾಗಿದೆ ಎಂದು ಮುಖಂಡರಾದ ಯಂಕಪ್ಪ ಕೆಂಗಲ್ ಹೇಳಿದರು.**

ನಗರದ ಪ್ರವಾಸಿ ಮಮದಿರದಿಂದ ಮೆರವಣಿಗೆ ಮೂಲಕ ಆಗಮಿಸಿ ತಹಶೀಲ್ದಾರ-ರಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರು ಮಾತನಾಡುತ್ತಾ ಹಮಾಲಿ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿ ರೀತಿಯಲ್ಲಿ ಹಣಕಾಸು ಸಂಪನ್ಮೂಲಗಳನ್ನು ಕ್ರೂಢಿಕರಿಸುವ ಯೋಜನೆಯನ್ನು ರೂಪಿಸಿ ಸಮಗ್ರ ಸಾಮಾಜಿ-ಕ ಭದ್ರತೆಯನ್ನು ನೀಡಬೇಕೆಂದು ಹಾಗೂ ಎಪಿಎಂಸಿಯಲ್ಲಿ ನಿವೃತ್ತರಾದ ಹಮಾಲ-ರಿಗೆ ಕನಿಷ್ಟ 1 ಲಕ್ಷ ನಿವೃತ್ತಿ ಪರಿಹಾರ ಅಥ-ವಾ ಇಡಿಗಂಟು ನೀಡಬೇಕು ಮತ್ತು ಹೊಸ ಲೈಸನ್ಸ್ ನೀಡಬೇಕೆಂದು ಒತ್ತಯಿಸಿದರು. ಈ ಸಣದರ್ಭದಲ್ಲಿ: ತಾಲೂಕು ಅಧ್ಯಕ್ಷ ನಾಗನಗೌಡ, ಕಾರ್ಯದರ್ಶಿ ಸತ್ಯಪ್ಪ, ಜಿಲ್ಲಾ ಕಾರ್ಯದರ್ಶಿ ಮರಿಸ್ವಾಮಿ, ಹೊನ್ನುರಪ್ಪ ತುರ್ವಿಹಾಳ, ಮಹೇಶ, ಅಪ್ಪಣ್ಣ, ಲಿಂಗಪ್ಪ, ಹನುಮಂತ,ಇಬ್ರಾಹಿಮ್‌ಸಾಬ್,ಮಾಬೂಸಾಬ್, ಶಕುಂತಲಾ, ಗೀರಿಜಾ ಕಿಲ್ಲೇದ್ ಇದ್ದರು.

## ವಿವಿಧ ಕಚೇರಿಗಳಲ್ಲಿ ಮಾನವ ಹಕ್ಕುಗಳ ದಿನಾಚರಣೆಯ ಪ್ರತಿಜ್ಞಾವಿಧಿ ಬೋಧನೆ

❏ ನೈಜ್ಯ ದೆಸೆ ನ್ಯೂಸ್



**ರಾಯಚೂರು ಡಿಸೆಂಬರ್ 10 (ಕರ್ನಾಟಕ ವಾರ್ತೆ): ನೂತನ ಜಿಲ್ಲಾಧಿಕಾರಿಗಳ ಕಚೇರಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಡಿಸೆಂಬರ್ 10ರಂದು ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮಗಳು ನಡೆದವು. ದಿನಾಚರಣೆ ನಿಮಿತ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.**

ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಂಗಣದಲ್ಲಿ ಜಿಲ್ಲಾಧಿಕಾ-ರಿಗಳ ಕಚೇರಿಯ ವಿವಿಧ ಶಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ನಗರದ ಡಿಡಿಪಿಐ ಕಚೇರಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಆಜಾದ ನಗರದಲ್ಲಿರುವ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಜಿಲ್ಲಾ ಪ್ರತಿಜ್ಞಾವಿಧಿ ಬೋಧನೆ ಕಾರ್ಯಕ್ರಮ ನಡೆಯಿತು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಚೇ-ರಿಯಲ್ಲಿ ಉಪ ನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ನಗರದ ತೋಟಗಾರಿಕೆ ಇಲಾಖೆಯ ಕಚೇರಿಯಲ್ಲಿ ಉಪ ನಿರ್ದೇಶಕರಾದ ಅಮಹದ್ ಅಲಿ ಅವರ ನೇತೃತ್ವದಲ್ಲಿ ಮಾನವ ಹಕ್ಕುಗಳ ದಿನಾಚರಣೆಯ ಕಾರ್ಯಕ್ರಮ ನಡೆಯಿತು.

## ವಕೀಲರ ಪರಿಷತ್ ಚುನಾವಣೆ ಬೆಂಬಲ ನೀಡಲು ಜಿ. ಎಸ್.ವೀರಭದ್ರಪ್ಪ ಎಲ್ಲಾ ವಕೀಲರಲ್ಲಿ ಮನವಿ

**ಸಿಂಧನೂರು: ರಾಜ್ಯ ವಕೀಲರ ಪರಿಷತ್ ಚುನಾವಣೆಯ ತಮಗೆ ಬೆಂಬಲ ನೀಡುವ ಮೂಲಕ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ತಮ್ಮ ಸೇವೆ ಮಾಡುವ ಅವಕಾಶ ಮಾಡಿಕೊಡಬೇಕೆಂದು ಸೇವಾಕಾಂಕ್ಷಿ ಜಿ.ಎಸ್. ವೀರಭದ್ರಪ್ಪ ವಕೀಲರು ಮನವಿ ಮಾಡಿದರು.**

ಕನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆ ಮುಂಬರುವ ದಿನಗಳಲ್ಲಿ ನಡೆಯಲಿದ್ದು, ವಕೀಲರ ಪರಿಷತ್ ಸ್ಥಾನಕ್ಕೆ ಅಭ್ಯರ್ತಿಯಾಗಿ ಸ್ಪರ್ಧಿಸಲು ಆಕಾಂಕ್ಷಿಯಾಗಿದ್ದು, ನಿಮ್ಮೆಲ್ಲರ ಬೆಂಬಲ ಅಮೂಲ್ಯ ಆರ್ಶಿವಾದ ನೀಡಬೇಕೆಂದು ಮನವಿ ಮಾಡಿಕೊಳ್ಳಲು ಸಿಂಧನೂರು ವಕೀಲರ ಸಂಘಕ್ಕೆ ಭೇಟಿ ನೀಡಿ ವಕೀಲರೊಂದಿಗೆ ಸಭೆ ನಡೆಸಿದರು.



ಮುಂಬರುವ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ತಮಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಬೆಂಲಿಸುವಂತೆ ಕೋರಿದರು. ವೇದಿಕೆ ಮೇಲೆ ಸಂಘದ ಅಧ್ಯಕ್ಷರಾದ ಭೀಮನಗೌಡ ವಕೀಲರು, ಹಿರಯ ವಕೀಲರಾದ ಶಶಿಧರಗೌಡ ಕಲ್ಲೂರು, ಎಂ.ಅಮರೇಗೌಡ, ನಾಗರಾಜ ಮಸ್ಕಿ, ಜಿ.ಎಸ್.ಆರ್.ಕೆ ರೆಡ್ಡಿ, ಲಲಿತಾ ಚಿಲ್ಲಾ, ಇದ್ದರು. ಕಾರ್ಯಕ್ರಮದಲ್ಲಿ ಸಿಂಧನೂರಿನ ಹಿರಿಯ, ಕಿರಿಯ ಮತ್ತು ಮಹಿಳಾ ವಕೀಲರು ಕೂಡ ತಮ್ಮ ಬೆಂಬಲ ಸೂಚಿಸಿ ಶುಭ ಹಾರೈಸಿದರು.

## ಜನವಾದಿ ಮಹಿಳಾ ಸಂಘಟನೆಯಿಂದ ಮಹಿಳೆ ಮತ್ತು ಮಕ್ಕಳ ಮೇಲಿನ ಹಿಂಸೆ ನಿರ್ಮೂಲನೆಗೆ ಮನವಿ

❏ ನೈಜ್ಯ ದೆಸೆ ನ್ಯೂಸ್



**ಸಿಂಧನೂರು: ವಿಶ್ವ ಸಂಸ್ಥೆ ಕರೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸೆ ನಿರ್ಮೂಲನೆಗೆ ಒತ್ತಾಯಿಸಿ ಸಿಂಧನೂರು ತಾಲೂಕು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾ-ರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಅಧ್ಯಕ್ಷೆ ಶಕುಂತಲಾ ಪಾಟೀಲ್ ತಿಳಿಸಿದರು.**

ವಿಶ್ವಸಂಸ್ಥೆಯು ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸೆ ನಿರ್ಮೂಲನೆಗೆ ಕರೆ ನೀಡಿದೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ವಿಕಾರ ಸ್ವರೂಪದೊಂದಿಗೆ ನಡೆಯುತ್ತಿರುವ ಅತ್ಯಾಚಾರ, ಕೊಲೆ, ಲೈಂಗಿಕ ಕಿರುಕುಳ, ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯ, ಬಾಲ್ಯ ವಿವಾಹ, ಕೆಲಸದ ಸ್ಥಳಗಳಲ್ಲಿ ನಡೆಯುವ ಕಿರುಕುಳ, ಹೆಣ್ಣು ಭ್ರೂಣ ಹತ್ಯೆ, ಕೂಲೆ ತಾರತಮ್ಯ, ಲಿಂಗ ತಾರತಮ್ಯ, ಜಾತಿ, ಧರ್ಮ, ಜನಾಂಗೀಯ ಹೆಸರಿನಲ್ಲಿ ದಬ್ಬಾಳಿಕೆಗಳು, ಶಿಕ್ಷಣ ಮತ್ತು ಉದ್ಯೋಗ ನಿರಾಕರಣೆ ಮುಂತಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ದಬ್ಬಾಳಿಕೆಗಳನ್ನು ಪ್ರತಿರೋಧಿಸುತ್ತ ಹಲವು ಕಾರ್ಯಕ್ರಮಗಳನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ರಾಜ್ಯ ವ್ಯಾಪಿಯಾಗಿ ನಡೆಸುತ್ತಾ ಬಂದಿದೆ.

ಹಿಂಸೆ ನಿರ್ಮೂಲನೆಗಾಗಿ ಇಡೀ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಇಂದು ಮಹಿಳಾ ಹಕ್ಕುಗಳು ಹಾಗೂ ಮಾನವ ಹಕ್ಕುಗಳು ಎಂಬ ಘೋಷಣೆಯೊಂದಿಗೆ ಜನವಾದಿ ಮಹಿಳಾ ಸಂಘಟನೆ ಹೋರಾಟ ನಡೆಸುತ್ತಿದೆ ಎಂದರು. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಮೋದಿ ಸರ್ಕಾರ ಹತ್ತು ವರ್ಷಗಳ ಹಿಂದೆ ಹೇಳಿದ ಬೇಟಿ ಬಚಾವ್ರೋ, ಬೇಟಿ ಪಡಾವ್ರೋ" ಎಂಬ ಘೋಷಣೆಯು ಬರಿ ಘೋಷಣೆಯಾಗಿ ಉಳಿದಿದೆ. ಇಂದು ದೇಶದ ಮಹಿಳೆಯರು ಸುರಕ್ಷತೆ ಬದಲು ಅಸುರಕ್ಷಿತೆಯಿಂದ ಬದುಕು ನಡೆಸುವಂತಾಗಿದೆ. ಭಾರತದಲ್ಲಿ ತಲ ತಲಾಂತರಗಳಿಂದ ಹೆಣ್ಣನ್ನು ಭೋಗದ ವಸ್ತುವಾಗಿಯೇ ಕಾಣಲಾಗುತ್ತಿದೆ. ಹೆಣ್ಣು ದೈಹಿಕ, ಲೈಂಗಿಕ ಹಿಂಸೆಗೆ ತುತ್ತಾಗುತ್ತಿದ್ದಾಳೆ.

ಬಂಡವಾಳ ಶಾಹಿ, ಭೂಮಾಲೀಕ, ಪಾಳೆಗಾರಿ, ಪಿತೃ ಪ್ರಧಾನ ಸಮಾಜ ವ್ಯವಸ್ಥೆಯೇ ಇದಕ್ಕೆಲ್ಲ ಕಾರಣವಾಗಿದೆ. ದೇಶದ ಗಮನ ಸೆಳೆದಿರುವ ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ವೇದವಲ್ಲಿ, ಪದ್ಮಲತಾ, ಆನೆ ಮಾವುತ ನಾರಾಯಣ, ಯಮುನಾ, ಸೌಜನ್ಯ ಸೇರಿದಂತೆ ಇನ್ನೂ ಹಲವರ ಅಸಹಜ ಸಾವು, ಕೊಲೆಗಳು ಹಾಗೂ ಭೂಕಬಳಿಕೆ, ಸ್ವ-ಸಹಾಯ ಸಂಘಗಳಿಂದ ವಿಪರೀತ ಬಡ್ಡಿ ವಸೂಲಿ ಸೇರಿದಂತೆ ಎಲ್ಲವನ್ನು ಎಸ್.ಐ.ಟಿ ತನಿಖೆಗೆ ವಹಿಸಬೇಕೆಂದು ಜನವಾದಿ ಮಹಿಳಾ ಸಂಘಟನೆ ಆಗ್ರಹಿಸುತ್ತಿವೆ ಆದರೆ ಎಸ್.ಐ.ಟಿ ರಚಿಸುವುದಕ್ಕೆ ತಮ್ಮದೇ ಸರ್ಕಾರದ ವಿರುದ್ಧವೇ ಉಪಮುಖ್ಯಮಂತ್ರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಹಾಗೂ ಗೃಹ ಸಚಿವರು ಆಡುತ್ತಿರುವ ಮಾತುಗಳು ಅತ್ಯಂತ ಖಂಡನೀಯವಾಗಿವೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾರೆಯಾಗಿ ಜನಸಾಮಾನ್ಯರ ಬದುಕಿಗೆ ಕೊಳ್ಳಿಯಿಟ್ಟು ಚೆಲ್ಲಾಟವಾಡುತ್ತಿರುವುದನ್ನು ಖಂಡಿಸಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ಮಾಡುವ ಮೂಲಕ ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿದ್ದೇವೆ ಎಂದು ತಾಲೂಕು ಅಧ್ಯಕ್ಷರಾದ ಗಿರೀಜಾ ಕಿಲ್ಲೇದ್ ಹೇಳಿದರು. ಈ ಸಂದರ್ಭದಲ್ಲಿ: ತಾಲೂಕಾ ಸಮಿತಿ ಸದಸ್ಯರಾದ ಸವಿತಾ ಕಲ್ಲೂರು, ಜನತಾ ಕಾಲೋನಿ ಘಟಕದ ಮುಖಂಡರಾದ ಬಾನು, ಗೌಸಿಯಾ, ಮಾಲನಬೀ, ಪರ್ವಿನ್ ಸೇರಿದಂತೆ ಅನೇಕರಿದ್ದರು.

## ಸಾಹಿತ್ಯ ಸಿಂಚನ

ಅಪ್ಪ
ಕಣ್ಣಲ್ಲೇ ಪ್ರೀತಿ ಅಡಗಿಸಿಟ್ಟು
ಜವಾಬ್ದಾರಿ ಸರಪಳಿಯಲ್ಲಿ
ಬಂಧಿಯಾದ ಜೀವ ಅಪ್ಪ

ಕಷ್ಟದ ಕಾಲವನ್ನ ಎದುರಿಸುವ ಸಾಹುಕಾರ
ಮಕ್ಕಳ ಭವಿಷ್ಯಕ್ಕೆ
ಹಗಲಿರುಳು ದುಡಿವ ಕರ್ಣನೇ ಅಪ್ಪ

ಮಕ್ಕಳಿಗೆ ಇವನ ಅಂದ್ರೆ ಜೀವ
ಮನೆಗೆ ಬಂದ ಸೊಸೆಗೆ ಮಾವ
ಮನೇಲಿ ಹುಟ್ಟಿದ ಹೆಣ್ಣುಮಕ್ಕಳಿಗೆ ಜೀವ ಅವನೇ
ಅಪ್ಪ

ಜೊತೇಲಿ ಇದ್ದ ಹೆಂಡ್ತಿಗೆ ಇವನೇ ಆಸರೆ
ಗಂಡು ಮಕ್ಕಳಿಗೆ ಅಂದ್ರೆ ಬೇಸರ
ಆದ್ರೆ ಇವನಂದ್ರೆ ಮನದಲ್ಲೇ ಬೆಳಗುವ ಆರತಿ
ಅಪ್ಪ ಅನ್ನೋದೆ ದೊಡ್ಡ ಕೀರ್ತಿ ಅವನೇ ಅಪ್ಪ
ಕುಷ್ಟಗಿ.

**ಎಸ್.ದುರಗಪ್ಪ .**

## ಸಿಂಧನೂರಿನಲ್ಲಿ ಸರಕಾರಿ ಬಿ.ಇಡಿ ಸರ್ಕಾರಿ ಕಾನೂನು ಪದವಿ ಮಹಾವಿದ್ಯಾಲಯಗಳನ್ನು ಜಾರಿಗೊಳಿಸಲು ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ಎಲ್ಲಾ ರಂಗಗಳಲ್ಲೂ ಮುಂದುವರೆದಿರುವ ತಾಲೂಕು ಎನ್ನುವ ಹೆಗ್ಗಳಿಕೆಯನ್ನು ಸಿಂಧನೂರು ತಾಲೂಕು ಹೊಂದಿದೆ. ಆದರೆ ಶೈಕ್ಷಣಿಕವಾಗಿ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಬೇಕಾಗಿದೆ.



ಆ ನಿಟ್ಟಿನಲ್ಲಿ ನಮ್ಮ ತಾಲೂಕಿಗೆ ಸರ್ಕಾರಿ ಬಿ.ಇಡಿ ಕಾಲೇಜು ಮತ್ತು ಸರ್ಕಾರಿ ಕಾನೂನು ಮಹಾವಿದ್ಯಾಲಯದ ಅವಶ್ಯ ಮತ್ತು ಈ ಭಾಗದ ಅಸಂಖ್ಯಾತ ವಿದ್ಯಾರ್ಥಿಗಳ ಬಹುದೊಡ್ಡ ಬೇಡಿಕೆಯಾಗಿದೆ. ಈ ಎರಡು ಕಾಲೇಜುಗಳನ್ನು ನಮ್ಮ ತಾಲೂಕಿಗೆ ಸರ್ಕಾರದಿಂದ ಮಂಜೂರು ಮಾಡಿಸಿದರೆ ವಿದ್ಯಾರ್ಥಿಗಳು ಬೇರೊಂದು ತಾಲೂಕು ಅಥವಾ ಜಿಲ್ಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ವಲಸೆ ಹೋಗುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದಾಗಿ ನಮ್ಮ ತಾಲೂಕಿಗೆ ಈ ಎರಡು ಕಾಲೇಜುಗಳನ್ನು ಮಂಜೂರು ಮಾಡಿಸಲು ಬೆಳಗಾವಿಯಲ್ಲಿ ನಡೆದಿರುವ ಅಧಿವೇಶನದಲ್ಲಿ ಧ್ವನಿ ಎತ್ತಿ, ನಮ್ಮ ಭಾಗದ ಸಹಸ್ರ ವಿದ್ಯಾರ್ಥಿಗಳ ಬೇಡಿಕೆಯನ್ನು ಈಡೇರಿಸ ಬೇಕು ಎಂದು ಸಿಂಧನೂರು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಅಧ್ಯಕ್ಷ ದುರ್ಗೇಶ ಕಲಮಂಗಿ ಒತ್ತಾಯಿಸಿದರು.

### ಸಿಂಧನೂರು ತಾಲೂಕು ಗ್ರಾಮೀಣ ಕೃಷಿ ಸಹಕಾರಿ ಸಂಘಗಳ ನೌಕರರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದ ದೊಡ್ಡ ಬಸವ ನಗನೂರ್ ಅವರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

ಸಿಂಧನೂರ್: ತಾಲೂಕಿನ ತಾಲೂಕ ಗ್ರಾಮೀಣ ಕೃಷಿ ಸಹಕಾರಿ ಸಂಘಗಳ ನೌಕರರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದ ದೊಡ್ಡ ಬಸವ ನಗನೂರ್ ಅವರಿಗೆ ಸ್ನೇಹಿತರ ಬಳಗದ ವತಿಯಿಂದ ಸನ್ಮಾನಿಸಲಾಯಿತು.. ಕಾರ್ಯಕ್ರಮದಲ್ಲಿ ಚಂದ್ರೇಗೌಡ ಹೆಚ್ , ಪತ್ರಕರ್ತರಾದ ಅಶೋಕ್ ಬೆನ್ನೂರ್, ಅಮರೇಶ್ ಅಲಬನೂರ್, ಚಿದಾನಂದಪ್ಪ ಬೂದಿಹಾಳ, ಇನ್ನಿತರ ಸ್ನೇಹಿತರು ಉಪಸ್ಥಿತರಿದ್ದರು.

**ನೈಜ್ಯೆ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

### ಜಯ ಕರ್ನಾಟಕ ಜನಪರ ವೇದಿಕೆಗೆ ಸೇರ್ಪಡೆ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಬೆಂಗಳೂರಿನಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ಸಂಸ್ಥಾಪಕ ಅಧ್ಯಕ್ಷರಾದ ಬಿ ಗುಣರಂಜನಶೆಟ್ಟಿ ರಾಜ್ಯದ್ಯಕ್ಷರಾದ ಬಿ ಶ್ರೀನಿವಾಸ್ ಹಾಗೂ ಕಾರ್ಯಧ್ಯಕ್ಷರಾದ ರಾಮಚಂದ್ರಯ್ಯಮತ್ತು ಶೆ ಬೋ ರಾಧಾಕೃಷ್ಣ ರಾಜ್ಯ ಪ್ರಧಾನ ಸಂಚಾಲಕರು ಅವರ



ಸಮ್ಮುಖದಲ್ಲಿ ವಿಜಯಪುರ ಜಿಲ್ಲಾ ಮುಖಂಡರಾದ ಬಸನಗೌಡ ಸಿಂಗನಹಳ್ಳಿ ಅವರು ನೇತೃತ್ವದಲ್ಲಿ ಹಲವೂ ಮುಖಂಡರು ಜಯ ಕರ್ನಾಟಕ ಜನಪರ ವೇದಿಕೆ ಮಂಗಳವಾರ ಸೇರ್ಪಡೆಗೊಂಡರು.

# ಹಗಲಿರುಳು ಕುಟುಂಬ ಏಳ್ಗೆಗಾಗಿ ಜೀವನವನ್ನು ಮುಡುಪಾಗಿಡುವ ಮನೆಯ ಮಹಿಳೆಯ ಗೌರವಕ್ಕಾಗಿ ಶೌಚಾಲಯ ನಿರ್ಮಿಸಿ:ಡಾ ಸತೀಶ್

❑ ನೈಜ್ಯ ದೆಸೆ ನ್ಯೂಸ್



ರಾಯಚೂರು: ಹಗಲಿರುಳು ಕುಟುಂಬ ಏಳ್ಗೆಗಾಗಿ ಜೀವನವನ್ನು ಮುಡುಪಾಗಿಡುವ ಮನೆಯ ಮಹಿಳೆಯ ಗೌರವಕ್ಕಾಗಿ ಶೌಚಾಲಯವನ್ನು ನಿರ್ಮಿಸುವ ಜೊತೆಗೆ ಬಳಕೆಗೂ ಆದ್ಯತೆ ನೀಡಿ ಕುಟುಂಬದ ಎಲ್ಲ ಸದಸ್ಯರು ರೋಗ ರುಜಿನಗಳಿಂದ ಸಂರಕ್ಷಿಸಲು ಮುಂದೆ ಬರಲು ಮಟಮಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸತೀಶ್ ತಿಳಿಸಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಗ್ರಾಮ ಪಂಚಾಯತ ಸಹಯೋಗದೊಂದಿಗೆ ಮಟಮಾರಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಶೌಚಾಲಯ ಮಹತ್ವ ಕುರಿತು ಶಾಲಾ ಮಕ್ಕಳಿಗೆ ಹಮ್ಮಿಕೊಂಡ ಜಾಗೃತಿ ಶಿಬಿರದಲ್ಲಿ ಮಾತನಾಡುತ್ತಾ, ಭಾರತ ಸರಕಾರವು ಸ್ವಚ್ಚ ಭಾರತ ಅಭಿಯಾನದಡಿ ದೇಶಾದ್ಯಂತ ಜನರ ಆರೋಗ್ಯ ಸುಧಾರಣೆ, ಸಾಂಕ್ರಾಮಿಕ ರೋಗ ತಡೆಯಾಗಿ ಶೌಚಾಲಯಗಳ ನಿರ್ಮಾಣ ಮತ್ತು ಬಳಕೆಗೆ ಒತ್ತು ನೀಡಿದ್ದು, ಬಯಲು ಶೌಚದಿಂದ ಜಂತುಹುಳು ಭಾದೆಯಿಂದ ರಕ್ತಹೀನತೆ ಉಂಟಾಗುವುದಲ್ಲದೆ, ಮಕ್ಕಳ ಬೆಳವಣಿಗೆಗೆ ಅಡೆಯಾಗುತ್ತದೆ.

ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರೂ ತಪ್ಪದೆ ಶೌಚಾಲಯ ನಿರ್ಮಿಸಿ ಬಳಕೆಯನ್ನು ಮಾಡಬೇಕು, ಅಲ್ಲದೆ ಊಟಕ್ಕಿಂತ ಮೊದಲು ಹಾಗೂ ಶೌಚದ ನಂತರ ತಪ್ಪದೆ ಸಾಬೂನು ಮತ್ತು ನೀರಿನಿಂದ ಕೈತೊಳೆಯಲು ಮರೆಯಬಾರದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಭಾರಿ ಮುಖ್ಯೋಪಾಧ್ಯಾಯ ಬಸವರಾಜ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಆರೋಗ್ಯ ನಿರೀಕ್ಷಣಾಧಿಕಾರಿ ಯಲ್ಲಾಲಿಂಗ ಸೇರಿದಂತೆ ಶಾಲಾ ಮಕ್ಕಳು ಹಾಜರಿದ್ದರು.

# ಸರಳವಾಗಿ ದಾಂಪತ್ಯಕ್ಕೆ ಜೀನವಕ್ಜೆ ಕಾಲಿಟ್ಟ ಮಾಜಿ ತಾಲೂಕು ಪಂಚಾಯತ್ ಅಧ್ಯಕ್ಷ ಶಿವಣ್ಣ ನಾಯಕ

❑ ನೈಜ್ಯ ದೆಸೆ ನ್ಯೂಸ್



ಮಸ್ಕಿ: ಇತ್ತೀಚಿನ ದಿನಮಾನಗಳಲ್ಲಿ ಲಕ್ಷಾಂತರ ಹಣ ಖರ್ಚು ಮಾಡಿ ಮದುವೆ ಸಮಾರಂಭ ಮಾಡುವುದು ಒಂದು ಸ್ಟೇಟಸ್ ಆಗಿದೆ. ಆದರೆ ಇಲ್ಲಿನ ಮಾಜಿ ತಾಲೂಕು ಪಂಚಾಯಿತಿ ಅಧ್ಯಕ್ಷ ಶಿವಣ್ಣ ನಾಯಕ ವೆಂಕಟಾಪುರ ಅವರು ಯಾವುದೇ ಆಡಂಬರವಿಲ್ಲದೆ ಜನರಿಲ್ಲದೆ ಕುಟುಂಬ ಸದಸ್ಯರ ಸಮ್ಮುಖದಲ್ಲಿ ತೀರ್ಥಭಾವಿ ಅಮರೇಶ್ವರ ದೇವಸ್ಥಾನದಲ್ಲಿ ಸರಳ ವಿವಾಹವಾಗುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ.

ಮಸ್ಕಿ ಪಟ್ಟಣದ ಸಮೀಪವಿರುವ ವೆಂಕಟಪುರ ಗ್ರಾಮದ ಮಾಜಿ ತಾಲೂಕು ಪಂಚಾಯಿತಿ ಅಧ್ಯಕ್ಷ ರಾಗಿ ಕಾರ್ಯನಿರ್ವಹಿಸಿ ತಾಲೂಕು ಸೇರಿದಂತೆ ಜಿಲ್ಲೆಯಲ್ಲಿ ತಮಗೆ ಆಹ್ವಾನ ನೀಡುವ ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ಪ್ರತಿನಿತ್ಯ ಭಾಗವಹಿಸಿ ಜನರೊಂದಿಗೆ ಬೆರೆಯುವ ಯುವಕರ ನಾಯಕ ರಾಜಕಾರಣದಲ್ಲಿ ಪ್ರತಿಯೊಬ್ಬರ ಜೊತೆ

> ನಾನು ಈಗಾಗಲೇ ಸಕ್ರಿಯ ರಾಜಕಾರಣದಲ್ಲಿ ಇರುವುದರಿಂದ ನನಗೆ ಬಹಳಷ್ಟು ಜನ ಆತ್ಮೀಯರು ಇರುವುದರಿಂದ ನನ್ನ ಮದುವೆಗಾಗಿ ಎಲ್ಲರೂ ತಮ್ಮ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಬರುವುದು ಬೇಡ ಎನ್ನುವ ಉದ್ದೇಶದಿಂದ ಹಾಗೂ ದುಂದು ವೆಚ್ಚಕ್ಕೆ ಮಡಿವಾಣ ಹಾಕಬೇಕು ಎನ್ನುವ ಉದ್ದೇಶದಿಂದ ಸರಳವಾಗಿ ವಿವಾಹವಾಗಿದ್ದೇನೆ.
> – ಶಿವಣ್ಣ ನಾಯಕ್ ವೆಂಕಟಾಪುರ

ಅವಿನಾಭಾವ ಸಂಬಂಧವನ್ನು ಹೊಂದಿರುವ ಶಿವಣ್ಣನಾಯಕ ಅವರು ತಮ್ಮ ಮದುವೆಯನ್ನು ಅದ್ದೂರಿಯಾಗಿ ಮಾಡಿಕೊಳ್ಳಬೇಕು ಎಂದು ಅವರ ಆತ್ಮೀಯ ಗೆಳೆಯರ ಒತ್ತಾಸೆಯಾಗಿತ್ತು.

ಆದರೆ ಇದಕ್ಕೆ ತದ್ವಿರುದ್ಧವಾಗಿ ಆಡಂಬರದಿಂದ ಮದುವೆ ಮಾಡಿಕೊಳ್ಳುವುದರಿಂದ ಏನು ಪ್ರಯೋಜನವಿಲ್ಲ ಎಂದು ಯಾರಿಗೂ ಸಹ ಹೇಳದಂತೆ ಮಸ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸುಪ್ರಸಿದ್ಧ ತೀರ್ಥಭಾವಿ ಅಮರೇಶ್ವರ ದೇವಸ್ಥಾನದಲ್ಲಿ ಬುಧವಾರ ಬೆಳಿಗ್ಗೆ ಬೇಡರ ಕಾರಲಕುಂಟಿ ಗ್ರಾಮದ ಅಶ್ವಿನಿ ಎನ್ನುವರ ಜೊತೆಗೆ ದಾಂಪತ್ಯಕ್ಕೆ ಕಾಲಿಟ್ಟಿದ್ದು ಇದು ಇನ್ನಿತರರಿಗೆ ಮಾದರಿಯಾಗಿದೆ ಎಂದು ಅವರ ಆಪ್ತ ಗೆಳೆಯರು ಹೇಳಿಕೊಂಡಿದ್ದಾರೆ. ಈಗಲಾದರೂ ಮುಂಬರುವ ದಿನಗಳಲ್ಲಿ ಪ್ರತಿಯೊಬ್ಬ ಕುಟುಂಬದವರು ಆಡಂಬರದ ಮದುವೆ ಬಿಡುವುದನ್ನು ಬಿಟ್ಟು ಸರಳವಾಗಿ ಮದುವೆ ಮಾಡಿಕೊಳ್ಳುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕು ಎನ್ನುವುದು ಯುವಕರ ಒತ್ತಾಯ.

# ಗ್ರಾಮಗಳ ಅಭಿವೃದ್ಧಿಯೇ ದೇಶದ ಪ್ರಗತಿಯ ಅಸ್ತಿವಾರ: ಅಯ್ಯಪ್ಪ ಅಕ್ಕಸಾಲಿ

❑ ನೈಜ್ಯ ದೆಸೆ ನ್ಯೂಸ್




**ಮಾನ್ವಿ: ಗ್ರಾಮಗಳ ಅಭಿವೃದ್ಧಿಯಾಗದೇ ಯಾವುದೇ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವೆನಿಸಲು ಸಾಧ್ಯವಿಲ್ಲ, ದೇಶದ ಒಟ್ಟು ಪ್ರಗತಿಯ ನೆಲೆಗಟ್ಟಾಗಿರುವುದು ಗ್ರಾಮದ ಅಭಿವೃದ್ಧಿಯೇ ಎಂದು ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿದ್ದ ಅಯ್ಯಪ್ಪ ಅಕ್ಕಸಾಲಿ ಅವರು ಹೇಳಿದರು.**

ಶ್ರೀ ಪಂಪ ಅರ್ಪಾಕ್ಷೇಶ್ವರ ಪದವಿಪೂರ್ವ ಕಾಲೇಜಿನ ತಾಲ್ಲೂಕು ಮಟ್ಟದ ಎನ್‌ಎಸ್‌ಎಸ್ ಘಟಕದ ವತಿಯಿಂದ ತಮ್ಮಪರ ಗ್ರಾಮದಲ್ಲಿ ನಡೆಯುತ್ತಿರುವ ವಿಶೇಷ ಶಿಬಿರದ ಎರಡನೇ ದಿನದ ಉಪನ್ಯಾಸದಲ್ಲಿ ಅವರು ಮಾತನಾಡಿದರು. ಗ್ರಾಮಗಳಲ್ಲಿ ಅಗತ್ಯ ಮೂಲಸೌಕರ್ಯ, ಸ್ವಚ್ಚತೆ, ಉತ್ತಮ ಆರೋಗ್ಯ ಸೇವೆಗಳು ಬಲಪಡಿಸಿದಾಗ ಮಾತ್ರ ದೇಶ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾಣುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ಸ್ವಚ್ಚತೆ ಮತ್ತು ಆರೋಗ್ಯ ಜಾಗೃತಿಗೆ ಶಿಬಿರಾರ್ಥಿಗಳು ನೀಡುತ್ತಿರುವ ಸೇವೆಯನ್ನು ಅವರು ಮೆಚ್ಚಿದರು. ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿದ ತಮ್ಮಾಪುರದ ಭಾರತೀಯ ಸೇನೆಯ ಸೈನಿಕ ಬಂಗಾರಪ್ಪ ಅವರು ಮಾತನಾಡಿ, ಪರಿಸರದ ಸ್ವಚ್ಚತೆಗಾಗಿ ಶಿಬಿರಾರ್ಥಿಗಳಲ್ಲಿ ಸೇವಾ ಮನೋಭಾವ ಬೆಳೆಸುವಲ್ಲಿ ಎನ್‌ಎಸ್‌ಎಸ್ ಘಟಕದ ಕಾರ್ಯ ಶ್ಲಾಘನೀಯವಾಗಿದೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮಕ್ಕೆ ಶ್ರೀ ರೇಣುಕಾ ಎಲ್ಲಮ್ಮ ದೇವಿ ಆಶ್ರಮದ ಪೂಜ್ಯಶ್ರೀ ಕುಮಾರೆಪ್ಪ ಗುರುಗಳು ಸಾನಿಧ್ಯ ವಹಿಸಿದ್ದರು. ಉಪನ್ಯಾಸಕ ಉಮರ್ ಫಾರೂಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಮಾರ್ಟಿನ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಕುಮಾರಿ ಪ್ರಿಯಾಂಕ ನಾಯಕ್ ಸ್ವಾಗತಿಸಿದರು, ಶಿಬಿರಾರ್ಥಿ ಅರವಿಂದ್ ಕುಮಾರ ವಂದಿಸಿದರು, ಕುಮಾರಿ ಮಹೇಶ್ವರಿ ಪ್ರಾರ್ಥನೆ ಗೀತೆ ಹಾಡಿದರು. ಅಗತ್ಯವಿದ್ದರೆ ಕ್ಯಾಪ್ಷನ್ ಮತ್ತು ಹ್ಯಾಶ್‌ಟ್ಯಾಗ್‌ಗಳನ್ನೂ ನೀಡುತ್ತೇನೆ.

# ಶಿಕ್ಷಕರ ಸಹಪತ್ಯ ಚಟುವಟಿಕೆಗಳ ಸ್ಪರ್ಧೆ

❑ ನೈಜ್ಯ ದೆಸೆ ನ್ಯೂಸ್



**ತಾಳಿಕೋಟೆ: ಮುದ್ದೇಬಿಹಾಳ ತಾಲ್ಲೂಕಿನ ಸರಕಾರಿ ,ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರ ಸಹ ಪತ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ವಿಜಯಪುರ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ,ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ ಇವರು ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿತ್ತು.**

ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಪ್ರತಿವರ್ಷದಂತೆ ಶಿಕ್ಷಕರ ಸಹಪತ್ಯ ಚಟುವಟಿಗಳನನ್ನು ಹಮ್ಮಿಕೊಳ್ಳಲಾಗಿದ್ದು.ಒಟ್ಟು ಏಳು ವಿವಿಧ ಸ್ಪರ್ಧೆ ಏರ್ಪಡಿಸಲಾಗಿದೆ.ಸ್ಥಳದಲ್ಲಿ ಪಾಠೋಪಕರಣ ತಯಾರಿಸುವದು, ಪ್ರಬಂಧಸ್ಪರ್ಧೆ,ಸ್ಥಳದಲ್ಲಿ ಚಿತ್ರ ಬರೆಯುವುದು, ಭಕ್ತಿ ಗೀತೆ, ಸಾಮಾನ್ಯ ವಿಷಯಗಳ ರಸಪ್ರಶ್ನೆ, ವಿಜ್ಞಾನ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳ ಪ್ರತಿ ಸ್ಪರ್ಧೆಗೆ ಮೂರು ಜನ ಅನುಭವಿ ನಿರ್ಣಾಯಕರನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಇಸಿಓ ಸುರೇಶ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿ ಶಿಕ್ಷಕರ ಕ್ರಿಯಾಶೀಲತೆ ಹೆಚ್ಚಿಸುವ ನಿಟ್ಟಿನಲ್ಲಿ ಹಮ್ಮಿಕೊಂಡ ಈ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಸ್ಪರ್ಧೆಯನ್ನು ಯಶಸ್ವಿಗೊಳಿಸಿ ಎಂದರು. ವೇದಿಕೆಯಲ್ಲಿ ಬಿ.ಟಿ. ವಜ್ಜಲ, ಮುಖ್ಯ ಶಿಕ್ಷಕಿ ಡಾ.ಅನಿತಾ ಸಜ್ಜನ,ಎಸ್.ಬಿ.ಚೌಧರಿ, ಸುರೇಶ ಬೀರಗೊಂಡ,ವಾಯ್.ಬಿ.ಬಡಿಗೇರ, ಅಶೋಕ ಕಟ್ಟಿ, ಪ್ರಕಾಶ ಸುರಪುರ, ಪ್ರೌಢಶಾಲಗಳ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು. ಸಿಆರ್‌ಪಿ ರಾಜಾಸಿಂಗ್ ವಿಜಾಪುರ ಸ್ವಾಗತಿಸಿದರು, ಶಿಕ್ಷಕಿ ಸುವರ್ಣ ಗದಗಿನಮಠ ನಿರೂಪಿಸಿದರು, ಸಿಆರ್‌ಪಿ ಕಾಶಿನಾಥ ಸಜ್ಜನ ವಂದಿಸಿದರು.

# ರಾಯಚೂರು ವಾರ್ತಾ ಇಲಾಖೆಯಲ್ಲಿ ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 10 (ಕರ್ನಾಟಕ ವಾರ್ತೆ): ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ರಾಯಚೂರು ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಈ ತರಬೇತಿಗಾಗಿ ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಲಕೋಟೆಯ ಮೇಲೆ ಕಡ್ಡಾಯವಾಗಿ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡುವ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಎಂದು ನಮೂದಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆಯ್ಕೆಯಾಗಿ ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ರಾಯಚೂರು ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಲ್ಲಿಸಬೇಕು. ಅಭ್ಯರ್ಥಿಗಳು ಸ್ನಾತ್ತಕೋತ್ತರ ಅಂತಿಮ ವರ್ಷದ ಪದವಿಯ ಅಂಕಪಟ್ಟಿಯೊಂದಿಗೆ ಅರ್ಜಿಸಲ್ಲಿಸಬೇಕು.

ಅಂಕಪಟ್ಟಿಯನ್ನು ನಿರೀಕ್ಷಿಸಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ತರಬೇತಿಯ ಅವಧಿ ವೇಳೆ ಮಾಹೆಯಾನ 15,000 ರೂ. (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗಳ ಸ್ಟೈ ಫಂಡ್ ನೀಡಲಾಗುವುದು ಹಾಗೂ ತರಬೇತಿಯ ಅವಧಿ ಬೆಳ್ಳಿಗೆ 10 ರಿಂದ ಸಂಜೆ 5.30 ರವರೆಗೆ ಇರುತ್ತದೆ. ಈ ತರಬೇತಿಯು 2026ರ ಕ್ಯಾಲೆಂಡರ್ ಅವಧಿಯ ಜನವರಿ–2026ರ ಮಾಹೆಯಿಂದ ಪ್ರಾರಂಭಗೊಂಡು ಡಿಸೆಂಬರ್–2026ಕ್ಕೆ ಕೊನೆಗೊಳ್ಳಲಿದೆ. ಈ ತರಬೇತಿಯು 12 ತಿಂಗಳ ಅಪ್ರೆಂಟಿಸ್ ತರಬೇತಿಯಾಗಿದ್ದು, ತಾತ್ಕಾಲಿಕವಾಗಿರುತ್ತದೆ. ತರಬೇತಿ ಮುಗಿದ ನಂತರ ಮುಂದುವರೆಸಲು ಅಥವಾ ಖಾಯಂಗೊಳಿಸುವಂತೆ ಒತ್ತಡ ತರುವಂತಿಲ್ಲ ಹಾಗೂ ತರಬೇತಿಯ ಅವಧಿಯಲ್ಲಿ ಬೇರೆ ಉದ್ಯೋಗ ಮಾಡಬಾರದು.

ತರಬೇತಿ ಅವಧಿಯ ಮಧ್ಯದಲ್ಲಿ ಬಿಟ್ಟು ಹೋದರೆ ಮೂಲ ದಾಖಲಾತಿಗಳನ್ನು ಅವಧಿಗೆ ಮುನ್ನ ಹಿಂದುರುಗಿಸುವುದಿಲ್ಲ. ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಖಾಯಂ ಉದ್ಯೋಗ ಸಿಕ್ಕಿದಲ್ಲಿ ಷರತ್ತಿಗೊಳಪಟ್ಟು ಮೂಲ ದಾಖಲಾತಿಗಳನ್ನು ಹಿಂದಿರುಗಿಸಲಾಗುವುದು. ಒಮ್ಮೆ ಫಲಾನುಭವಿಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

ಈ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ಆಯ್ಕೆಯಾದ ಅಭ್ಯರ್ಥಿಗಳಿಂದ 20 ರೂ. (ಇಪ್ಪತ್ತು ರೂಪಾಯಿ ಮಾತ್ರ) ಗಳ ಛಾಪ ಕಾಗದದಲ್ಲಿ ಲಿಖಿತ ಹೇಳಿಕೆ ಪಡೆಯಲಾಗುವುದು. ಆಸಕ್ತರು, ಅರ್ಜಿಯನ್ನು ಡಿಸೆಂಬರ್ 26ರೊಳಗಾಗಿ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನದ ಮೇಲಮಹಡಿ, ಜಿಲ್ಲಾ ರಂಗಮಂದಿರದ ಹಿಂದೆ, ರಾಯಚೂರು ಜಿಲ್ಲೆ, ರಾಯಚೂರು ಇಲ್ಲಿಗೆ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೊ.9008462236 ಅಥವಾ ಮೊ.9743892080ಗೆ ಸಂಪರ್ಕಿಸುವಂತೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯ ಪ್ರಕಟಣೆ ತಿಳಿಸಿದೆ.

## ನೇಮಕಾತಿ ಪ್ರಕಟಣೆ

**KVAFSU** ನೇಮಕಾತಿ 2025–25 ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ **KVAFSU** ನೇಮಕಾತಿ 2025: 25 ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯವು ನವೆಂಬರ್ 2025 ರ KVAFSU ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೀದರ್ –ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಯ ಹೆಸರು ಹುದ್ದೆಗಳ ಸಂಖ್ಯೆ: ಪ್ರಾಧ್ಯಾಪಕರು 5 , ಸಹ ಪ್ರಾಧ್ಯಾಪಕರು–5, ಸಹಾಯಕ ಪ್ರಾಧ್ಯಾಪಕರು 15 https://kvafsu.edu.in/ ಅಧಿಕೃತ ವೆಬ್‌ಸೈಟ್: kvafsu.edu.in 13–ಡಿಸೆಂಬರ್–2025 IAF ನೇಮಕಾತಿ 2025: 340 ಫ್ಲೈಯಿಂಗ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ವಾಯುಪಡೆಯು ನವೆಂಬರ್ 2025 ರ ಖಂಈ ಅಧಿಕೃತ ಅಧಿಸೂಚನೆಯ ಮೂಲಕ ಫ್ಲೈಯಿಂಗ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 14–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. IAF ನೇಮಕಾತಿ ಸಂಸ್ಥೆ ಭಾರತೀಯ ವಾಯುಪಡೆ ಪೋಸ್ಟ್ ಹೆಸರು ಫ್ಲೈಯಿಂಗ್ ಆಫೀಸರ್ ಖಾಲಿ ಹುದ್ದೆಗಳ ಸಂಖ್ಯೆ 340 ಹುದ್ದೆಗಳು ಅರ್ಹತಾ ಪದವಿ, BE/ ಬಿ.ಟೆಕ್, ಪದವಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14–ಡಿಸೆಂಬರ್–2025 ವೆಬ್‌ಸೈಟ್ indianairforce.nic.in website https://afcat.edcil.co.in 14–ಡಿಸೆಂಬರ್–2025

## ಗಿಲ್ಲೇಸೂಗೂರು ವ್ಯಾಪ್ತಿಯ ಅಂಗನವಾಡಿಗಳಲ್ಲಿ ಖಾಲಿ ಇರುವ ಕಾರ್ಯಕರ್ತೆಯರ, ಸಹಾಯಕಿಯರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 10 (ಕರ್ನಾಟಕ ವಾರ್ತೆ): ರಾಯಚೂರು ತಾಲೂಕಿನ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ಮುಖಾಂತರ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ವಿವರ: ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ ಜಾಗೀರ ವೆಂಕಟಪೂರು ಗ್ರಾಮ ಪಂಚಾಯತಿಯ ಸುಲ್ತಾನಪೂರು ಕೇಂದ್ರ–1ಕ್ಕೆ ಎಸ್.ಸಿ., ಜೇಗರಕಲ್ ಗ್ರಾಮ ಪಂಚಾಯತಿಯ ಜಿ.ತಿಮ್ಮಾಪೂರು ಕೇಂದ್ರ–2ಕ್ಕೆ ಎಸ್.ಸಿ., ಬಾಯಿದೊಡ್ಡಿ ಗ್ರಾಮ ಪಂಚಾಯತಿಯ ಕುರುಬದೊಡ್ಡಿ ಕೇಂದ್ರ–2ಕ್ಕೆ ಎಸ್.ಸಿ., ತಲ್ಮಾರಿ ಕೇಂದ್ರ–4ಕ್ಕೆ ಇತರೆ, ದೇವಸೂಗೂರು ಗ್ರಾಮ ಪಂಚಾಯತಿಯ ಶಕ್ತಿನಗರ ಕೇಂದ್ರ–2ಕ್ಕೆ ಇತರೆ, ಮಟಮಾರಿ ಕೇಂದ್ರ–1ಕ್ಕೆ ಇತರೆ, ರಾಯಚೂರಿನ ಮಹಾನಗರ ಪಾಲಿಕೆಯ ವಾರ್ಡ ನಂ–35ರ ಕಸ್ಬೆಕ್ಯಾಂಪ್ ಕೇಂದ್ರ–1ಕ್ಕೆ ಇತರೆ, ಮಹಾನಗರ ಪಾಲಿಕೆ ರಾಯಚೂರು ವಾರ್ಡ ನಂ.34ರ ಯಕ್ಲಾಸಪೂರು ಕೇಂದ್ರ–1ಕ್ಕೆ ಇತರೆ, ಯದ್ಲಾಪೂರು ಕೇಂದ್ರ–4ಕ್ಕೆ ಇತರೆ, ಯದ್ಲಾಪೂರು ಗ್ರಾಮ ಪಂಚಾಯತಿಯ ವಡ್ಲೂರು ಕೇಂದ್ರ–2ಕ್ಕೆ ಇತರೆ, ಗಂಜಳ್ಳಿ ಕೇಂದ್ರ–1ಕ್ಕೆ ಇತರೆ, ಸಗಮಕುಂಟ ಕೇಂದ್ರ–1ಕ್ಕೆ ಇತರೆ, ಕಮಲಾಪೂರು ಗ್ರಾಮ ಪಂಚಾಯತಿಯ ಗಧಾರ ಕೇಂದ್ರಕ್ಕೆ ಇತರೆ ಮೀಸಲು ನಿಗದಿಪಡಿಸಲಾಗಿದೆ. ಅಂಗನವಾಡಿ ಸಹಾಯಕಿಯರ ಹುದ್ದೆಗಳ ವಿವರ: ಗಿಲ್ಲೇಸೂಗೂರು ಕ್ಯಾಂಪ್ ಕೇಂದ್ರ–3ಕ್ಕೆ ಎಸ್.ಸಿ., ದೇವಸೂಗೂರು ಕೇಂದ್ರ–5ಕ್ಕೆ ಎಸ್.ಸಿ, ಪೂರತಿಪ್ಲಿ ಗ್ರಾಮ ಪಂಚಾಯತಿಯ ಆಲ್ದೂರು ಕೇಂದ್ರ–2ಕ್ಕೆ ಎಸ್.ಸಿ., ಬಾಯಿದೊಡ್ಡಿ ಗ್ರಾಮ ಪಂಚಾಯತಿಯ ಗೌಸನಗರ ಕೇಂದ್ರಕ್ಕೆ ಎಸ್.ಸಿ., ರಾಯಚೂರು ಮಹಾನಗರ ಪಾಲಿಕೆಯ ವಾರ್ಡ್ ನಂ.34ರ ಅಸ್ಕಿಹಾಳ ಕೇಂದ್ರ–2ಕ್ಕೆ ಎಸ್.ಸಿ., ಎಲ್.ಕೆ.ದೊಡ್ಡಿ ಗ್ರಾಮ ಪಂಚಾಯತಿಯ ಮಾಸದೊಡ್ಡಿ ಕೇಂದ್ರ–3ಕ್ಕೆ ಎಸ್.ಟಿ., ಪೂರತಿಪ್ಲಿ ಗ್ರಾಮ ಪಂಚಾಯತಿಯ ತುರಕಣಡೋಣ ಕೇಂದ್ರ–2ಕ್ಕೆ ಎಸ್.ಟಿ, ಗುಂಜಳ್ಳಿ ಕೇಂದ್ರ–6ಕ್ಕೆ ಎಸ್.ಟಿ., ಮಿಟ್ಟಿಮಲ್ಕಾಪೂರು ಗ್ರಾಮ ಪಂಚಾಯತಿಯ ಹೊಸಮಲಿಯಾಬಾದ್ ಕೇಂದ್ರ–3ಕ್ಕೆ ಎಸ್.ಟಿ., ಹಳೆಮಲಿಯಾಬಾದ್ ಕೇಂದ್ರ–1ಕ್ಕೆ ಎಸ್.ಟಿ., ಯಾಪಲದಿನ್ನಿ ಗ್ರಾಮ ಪಂಚಾಯತಿಯ ನಾಗನದೊಡ್ಡಿ ಕೇಂದ್ರ–1ಕ್ಕೆ ಎಸ್.ಟಿ, ಮಟಮಾರಿ ಕೇಂದ್ರ–4ಕ್ಕೆ ಎಸ್.ಟಿ., ಕಾಡ್ಲೂರು ಗ್ರಾಮ ಪಂಚಾಯತಿಯ ಅರಶಿಣಗಿ ಕೇಂದ್ರ–3ಕ್ಕೆ ಇತರೆ, ಗಾಣಧಾಳ ಗ್ರಾಮ ಪಂಚಾಯತಿಯ ಬುಳ್ಳಾಪೂರು ಕೇಂದ್ರ–2ಕ್ಕೆ ಇತರೆ, ಎಲ್.ಕೆ.ದೊಡ್ಡಿ ಗ್ರಾಮ ಪಂಚಾಯತಿಯ ತುಂಟಾಪೂರು ಕೇಂದ್ರ–1ಕ್ಕೆ ಇತರೆ, ದೇವಸೂಗೂರು ಗ್ರಾಮ ಪಂಚಾಯತಿಯ ಶಕ್ತಿನಗರ ಕೇಂದ್ರ–1ಕ್ಕೆ ಇತರೆ, ಬಾಯಿದೊಡ್ಡಿ ಕೇಂದ್ರ–1ಕ್ಕೆ ಇತರೆ, ಬಿಜನಗೇರಾ ಗ್ರಾಮ ಪಂಚಾಯತಿಯ ಬೋಳಮಾನದೊಡ್ಡಿ ಕೇಂದ್ರಕ್ಕೆ ಇತರೆ, ಬಿಜನಗೇರಾ ಗ್ರಾಮ ಪಂಚಾಯತಿಯ ರಾಜಲಬಂಡ ಕೇಂದ್ರ–2ಕ್ಕೆ ಇತರೆ, ಮನ್ಸಲಾಪೂರು ಗ್ರಾಮ ಪಂಚಾಯತಿಯ ಹೊಸಪೇಟೆ ಕೇಂದ್ರ–1ಕ್ಕೆ ಇತರೆ, ಮಿಟ್ಟಿಮಲ್ಕಾಪೂರು ಕೇಂದ್ರ–2ಕ್ಕೆ ಇತರೆ, ಯದ್ಲಾಪೂರು ಕೇಂದ್ರ–1ಕ್ಕೆ ಇತರೆ, ಯದ್ಲಾಪೂರು ಕೇಂದ್ರ–4ಕ್ಕೆ ಇತರೆ, ಯದ್ಲಾಪೂರು ಗ್ರಾಮ ಪಂಚಾಯತಿಯ ವಡ್ಲೂರು ಕೇಂದ್ರ–1ಕ್ಕೆ ಇತರೆ, ವಡ್ಲೂರು ಕೇಂದ್ರ–2ಕ್ಕೆ ಇತರೆ, ಶಾಖವಾದಿ ಗ್ರಾಮ ಪಂಚಾಯತಿಯ ಕೂಡ್ಲೂರು ಕೇಂದ್ರ–1ಕ್ಕೆ ಇತರೆ, ಕಮಲಾಪೂರು ಗ್ರಾಮ ಪಂಚಾಯತಿಯ ಗಧಾರ್ ಕೇಂದ್ರ–2ಕ್ಕೆ ಇತರೆ, ರಾಯಚೂರು ಮಹಾನಗರ ಪಾಲಿಕೆಯ ವಾರ್ಡ ನಂ.33ರ ಯರಮರಸ್ ಕೇಂದ್ರ–2ಕ್ಕೆ ಇತರೆ, ರಾಯಚೂರಿನ ಮಹಾನಗರ ಪಾಲಿಕೆಯ ವಾರ್ಡ ನಂ.35ರ ಕಸ್ಬೆಕ್ಯಾಂಪ್ ಕೇಂದ್ರ–2ಕ್ಕೆ ಇತರೆ ಮೀಸಲು ನಿಗದಿಪಡಿಸಿದ್ದು, ಆಸಕ್ತರು ಜನವರಿ 7 ರೊಳಗಾಗಿ ಆನ್‌ಲೈನ್ ವಿಳಾಸ: ῃಣಣಥಿ://ಇಚಿಡಿಟಿಜಟಚಿಇಚಿರಟಿಜ.ಇಚಿಡಿ.ಟುಭಿಎಟಿ/ಚಿಛಛಿಜ/ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಅಪೂರ್ಣ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಕಚೇರಿಯ ಸಮಯದಲ್ಲಿ ಸಂಕರ್ಕಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.13 ರಂದು ವಿಶ್ವ ವಿಕಲಚೇತನರ ದಿನಾಚರಣೆ ವಿಕಲಚೇತನರ ಹಕ್ಕು ಸಬಲೀಕರಣಕ್ಕೆ ಸಮಾಜ ಜಾಗೃತಿಯಾಗಬೇಕು: ದೇಸಾಯಿ ದೊತರಬಂಡಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಟಿ.ಎ.ಪಿ.ಎಂ.ಸಿ.ಎಸ್ ಆವರಣದಲ್ಲಿ ಡಿಸೆಂಬರ್ 13ರಂದು ಬೆಳಿಗ್ಗೆ 11 ಗಂಟೆಗೆ ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು ವತಿಯಿಂದ ವಿಶ್ವ ವಿಕಲಚೇತನರ ದಿನಾಚರಣೆ ಹಮ್ಮಿಕೊಳ್ಳಲಾಗುವುದು ಎಂದು ಒಕ್ಕೂಟದ ಗೌರವಾಧ್ಯಕ್ಷ ದೇಸಾಯಿ ದೊತರಬಂಡಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ವಿಕಲಚೇತನರು ಎದುರಿಸುವ ಸವಾಲುಗಳನ್ನು ಸಮಾಜ ಅರಿತು, ಅವರ ಹಕ್ಕುಗಳು, ಗೌರವ, ಸಮಾನತೆ ಮತ್ತು ಸಬಲೀಕರಣಕ್ಕೆ ಪ್ರೋತ್ಸಾಹ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.**

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಶಿವಕುಮಾರ್ ಚಲ್ಮಲ್ ಅವರು,




ಕಾರ್ಯಕ್ರಮಕ್ಕೆ ಕಲ್ಮಠದ ಪೂಜ್ಯ ಶ್ರೀ ಷ. ಬ್ರ. ವಿರೂಪಾಕ್ಷ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಮುಸ್ಲಿಂ ಸಮುದಾಯದ ಧರ್ಮಗುರು ಶ್ರೀ ಸೈಯದ್ ಸಜ್ಜದ್ ಹುಸೇನ್ ಮತವಾಲೆ ಸಾಹೆಬ್ ಹಾಗೂ ಸೇಂಟ್ ಮೇರಿಸ್ ಕ್ಯಾಥೋಲಿಕ್ ಚರ್ಚನ ವಂ? ಫಾದರ್ ವಿನ್ಸೆಂಟ್ ಸುರೇಶ್ ರವರ ದಿವ್ಯ ಸಾನ್ನಿಧ್ಯ ಲಭ್ಯವಿರಲಿದೆ ಎಂದು ಹೇಳಿದರು. ಮಾನ್ವಿ ಶಾಸಕರಾದ ಜಿ. ಹಂಪಯ್ಯ ನಾಯಕ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸಾಹಿತಿಗಳಾದ ದೇವರಾಜ್ ಎಸ್. ಬಪ್ಪೂರ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ದೇಸಾಯಿ ದೊತರಬಂಡಿ ವಹಿಸಲಿದ್ದಾರೆ.

ಜಿಲ್ಲೆ ತಾಲೂಕು ಮಟ್ಟದ ರಾಜಕೀಯ ನಾಯಕರು, ಸರ್ಕಾರಿ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿಕಲಚೇತನರು ಭಾಗವಹಿಸಲಿದ್ದಾರೆ. ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮ ಯಶಸ್ವಿಯಾಗಲು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ಬೆಂಬಲಿಸಬೇಕೆಂದು ಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಸಾವಿತ್ರಮ್ಮ, ಮಾನ್ವಿ ತಾಲೂಕು ಅಧ್ಯಕ್ಷರಾದ ಲಕ್ಷ್ಮೀ ಉಟಕನೂರು, ಸಿರವಾರ ತಾಲೂಕು ಅಧ್ಯಕ್ಷರಾದ ಅಮರೇಶ ಪಾಟೀಲ್ ಚಾಗಭಾವಿ, ಚಂದ್ರಶೇಖರ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಡಿ. 13 ರಂದು ಸ್ನೇಹಜ್ಯೋತಿ ಶಾಲೆಯಲ್ಲಿ ಸ್ನೇಹೋತ್ಸವ–ವಂ.ಫಾ.ಸುನಿಲ್ ಕರ್ನೆಲಿಯೋ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಡಿ.10.ತಾಲೂಕಿನ ಸಮೀಪದ ಪೋತ್ನಾಳ ಗ್ರಾಮದಲ್ಲಿ ಡಿ.13ರಂದು ಸ್ನೇಹ ಜ್ಯೋತಿ ವಿದ್ಯಾಲಯ ಚರ್ಚ್ ಶಾಲೆಯಲಿ ಸ್ನೇಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಾಂಶುಪಾಲರಾದ ವಂ.ಫಾ.ಸುನಿಲ್ ಕರ್ನೆಲಿಯೋ ಹೇಳಿದರು.**

ಪತ್ರಿಕೆ ಹೇಳಿಕೆ ನೀಡಿದ ಅವರು ಸ್ನೇಹೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ವಂ.ಫಾ. ಚಾರ್ಲ್ಸ್ ಪುರ್ಟಾಡೊ ವಹಿಸಲಿದಾರೆ, ಮುಖ್ಯ ಅತಿಥಿಗಳಾಗಿ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್ ಬೋಸರಾಜ್, ವಂ.ಫಾ. ಎರಿಕ್ ಮತಾಯಸ್ ಎಸ್ ಜೆ ಶಾಸಕ ಹಂಪಯ್ಯ ನಾಯಕ, ವಂ.ಪಾ. ಅಂತೋಣಿರಾಜ್, ಬಿಇಓ ಚಂದ್ರಶೇಖರ ದೊಡ್ಡಮನಿ, ಫಾ.ಸತೀಶ ಫೆರ್ನಾಂಡಿಸ್, ವಾಲಿಬಾಬು, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಲಕ್ಷ್ಮೀ ಈರಣ್ಣ, ಮಾನ್ವಿ ಪತ್ರಕರ್ತ ಸಂಘದ ಅಧ್ಯಕ್ಷ ನಾಗರಾಜ್ ತಡಕಲ್, ಫಾ. ಡೊಮಿನಿಕ್ ಸುನಿಲ್ ಲೋಬೋ, ಫಾ.ಪ್ರಶಾಂತ್ ಸಿಸ್ಟರ್ ಜೋಶ್ನಾ ಇತರರು ಇತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು ಈ ಕಾರ್ಯಕ್ರಮದಲ್ಲಿ ಊರಿನ ಮುಖಂಡರು ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಹೇಳಿದರು.

# ಮಾನವ ಹಕ್ಕುಗಳ ಅರಿವು ಅವಶ್ಯಕ :ಅಮರೇಶ ಗೌಡೂರು

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ವಿದ್ಯಾರ್ಥಿಗಳು, ಸಾರ್ವಜನಿಕರಲ್ಲಿ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸುವುದು ಅವಶ್ಯಕ ಎಂದು ಶ್ರೀ ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಅಮರೇಶ ಗೌಡೂರು ಹೇಳಿದರು.**

ಪಟ್ಟಣದ ಶ್ರೀ ಉಟಕನೂರು ಬಸವಲಿಂಗ ಶಿಕ್ಷಣ ಟ್ರಸ್ಟ್ ಹಾಗೂ ಶ್ರೀ ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾವಿದ್ಯಾಲಯದಲ್ಲಿ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ ಭಾರತ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ಅದರಲ್ಲಿ ಮಾನವ ಹಕ್ಕುಗಳ ವಿವರಗಳಿವೆ.




ಭಾರತ ಪ್ರಜೆಯಾದ ಪ್ರತಿ ವ್ಯಕ್ತಿಯೂ ಈ ಭೂಮಿ ಮೇಲೆ ಸಮಾನತೆ, ಸ್ವಾತಂತ್ರ್ಯದಿಂದ ಗೌರಯುತವಾಗಿ ಬದುಕಬೇಕಾದರೆ ಮಾನವ ಹಕ್ಕುಗಳು ಅವಶ್ಯಕವಾಗಿದೆ ಎಂದರು.

ಮಾನವ ಹಕ್ಕುಗಳು ಮನುಷ್ಯನ ಘನತೆಯನ್ನು, ಸ್ತ್ರೀಯರ ಸಮಾನತೆಯ ಸ್ವಾತಂತ್ರ್ಯವನ್ನು, ಮಕ್ಕಳಿಗೆ ಶಿಕ್ಷಣದ ಹಕ್ಕುಗಳನ್ನು ಒದಗಿಸಿವೆ. ಇವುಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ವಿಶ್ವಸಂಸ್ಥೆಯು ಡಿಸೆಂಬರ–10,1948ರಂದು 30 ಅಂಶಗಳನ್ನಳಗೊಂಡ ಮಾನವ ಹಕ್ಕುಗಳನ್ನು ಘೋಷಿಸಿತು. ಈ ಎಲ್ಲಾ ಅಂಶಗಳನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳು ಕಡ್ಡಾಯವಾಗಿ ಪಾಲಿಸಬೇಕು.

ನಮ್ಮ ದೇಶ ಹಾಗೂ ರಾಜ್ಯದಲ್ಲಿ 1993ರಲ್ಲಿ 'ಮಾನವ ಹಕ್ಕುಗಳ ಆಯೋಗ'ವನ್ನು ರಚಿಸಲಾಗಿದ್ದು, ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಹಾಗೂ ಉಲ್ಲಂಘನೆಯಾದರೆ ಅದಕ್ಕೆ ನ್ಯಾಯಯುತ ಪರಿಹಾರವನ್ನು ನೀಡುವ ಕಾರ್ಯ ಮಾಡುತ್ತಿವೆ ಎಂದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ವೆಂಕಟೇಶ ಪೂಜಾರಿ, ಚಂದ್ರಶೇಖರ ಹುನಕುಂಟಿ, ಶಂಬುಲಿಂಗಪ್ಪ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಅನುಗ್ರಹ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಹುಸೇನಸಾಬ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶನಿವಾರ ಡಿ 13 ರಂದು ಹಳೇ ಬಜಾರ, ವಾರ್ಡ್ ನಂ. 6 ಕಾಟಿಬೇಸ್ ಸಿಂಧನೂರು ಮಸ್ಜಿದ್–ಏ–ಹುದಾ, ಪಟೇಲವಾಡಿ ಸಿಂಧನೂರ ನಲ್ಲಿ ಅನುಗ್ರಹ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು.**

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಜ। ಮುಹಮ್ಮದ್ ಯೂಸೂಫ್ ಕನ್ನಿ ರಾಜ್ಯ ಕಾರ್ಯದರ್ಶಿಗಳು ಜ.ಇ.ಹಿಂದ್ ಕರ್ನಾಟಕ ಇವರು ನೆರವೇರಿಸಲಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು



ಜ॥ ಹುಸೇನಸಾಬ ಅಧ್ಯಕ್ಷರು ಅನುಗ್ರಹ ಸೌ.ಸ.ಸಂ.ನಿ, ಸಿಂಧನೂರು ಇವರು ವಹಿಸಲಿದ್ದು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಹಂಪನಗೌಡ ಬಾದರ್ಲಿ ಮಾನ್ಯ ಶಾಸಕರು ವಿಧಾನಸಭೆ ಸಿಂಧನೂರು ,ಶ್ರೀ ಬಸನಗೌಡ ಬಾದರ್ಲಿ ಮಾನ್ಯ ಶಾಸಕರು ವಿಧಾನ ಪರಿಷತ್ ಸಿಂಧನೂರು,ಶ್ರೀ ವೆಂಕಟರಾವ್ ನಾಡಗೌಡ ಮಾನ್ಯ ಮಾಜಿ ಸಚಿವರು ಸಿಂಧನೂರು,ಶ್ರೀ ಕೆ. ಕರಿಯಪ್ಪ ಬಿಜೆಪಿ ಮುಖಂಡರು ಸಿಂಧನೂರು ,ಜ॥ ಉಸಾಮಾ ಖಾನ್ ಸಿ.ಇ.ಓ ಮೈಕ್ರೋ ಫೈನಾನ್ಸ್ ಸಹುಲತ್ ಸೊಸೈಟೀಸ್ ನವದೆಹಲಿ,ಶ್ರೀ ಎಂ. ದೊಡ್ಡಬಸವರಾಜ ಜಿಲ್ಲಾಧ್ಯಕ್ಷರು ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ, ರಾಯಚೂರು, ಜ॥ ಬಾಬರ ಪಾಷ ವಕೀಲರು ಸಿಂಧನೂರು, ಜ॥ ಖಾಜಿ ಜಿಲಾನಿ ಪಾಷ ಅಧ್ಯಕ್ಷರು ಮಿಲಾಪ್ ಶಾದಿ ಮಹಲ್ ಸಿಂಧನೂರು, ಶ್ರೀ ನಟರಾಜ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ರಾಯಚೂರು ಜಿಲ್ಲೆ ಆಗಮಿಸಲಿದ್ದು ಪ್ರತಿಯೊಬ್ಬರು ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಅಂತರ್ಜಲ ಬಳಕೆಯ ನಿರ್ವಹಣೆ ಸಮರ್ಪಕವಾಗಿರಲಿ: ಜಿ.ಕೃಷ್ಣಮೂರ್ತಿ

ನೈಜ್ಯ ದೆಸೆ ನ್ಯೂಸ್



**ರಾಯಚೂರು ಡಿಸೆಂಬರ್ 10 (ಕರ್ನಾಟಕ ವಾರ್ತೆ): ಕೃಷಿ, ಕೈಗಾರಿಕೆ ಮತ್ತು ಕುಡಿಯುವ ನೀರಿನ ಅಗತ್ಯತೆಗಳನ್ನು ಪೂರೈಸಲು ಅಂತರ್ಜಲವು ಒಂದು ವಿಶ್ವಾಸಾರ್ಹ ಮೂಲವಾಗಿದೆ. ಭಾರತದಲ್ಲಿ ಅಂತರ್ಜಲವು ಎಲ್ಲಾ ಪ್ರದೇಶಗಳಲ್ಲಿ ಲಭ್ಯವಿದ್ದು, ಅದರ ಸಮರ್ಥ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ಜಾಗರೂಕತೆ ವಹಿಸಬೇಕು ಎಂದು ಬೆಂಗಳೂರಿನ ಸಿಜಿಡ್ಲೂಬಿ ಎಸ್.ಡ್ಲೂ.ಆರ್‌ನ ಪ್ರಾದೇಶಿಕ ನಿರ್ದೇಶಕರಾದ ಜಿ.ಕೃಷ್ಣಮೂರ್ತಿ ಅವರು ಹೇಳಿದರು.**

ಭಾರತ ಸರ್ಕಾರದ ಜಲಶಕ್ತಿ ಸಚಿವಾಲಯದ ಜಲಸಂಪನ್ಮೂಲ ಇಲಾಖೆ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಕೇಂದ್ರ ಬೆಂಗಳೂರಿನ ನೈಋತ್ಯ ಪ್ರದೇಶದ ಅಂತರ್ಜಲ ಮಂಡಳಿ ವತಿಯಿಂದ ಡಿಸೆಂಬರ್ 10ರ ಬುಧವಾರ ನಗರದ ಕೃಷಿ ಎಂಜಿನಿಯರಿಂಗ್ ಕಾಲೇಜಿನ ಸಿಲ್ವರ್ ಜುಬಿಲಿ ಸೆಮಿನಾರ್ ಹಾಲ್‌ನಲ್ಲಿ ನಡೆದ ಜಲಚರ ನಕ್ಷೆ, ಅಂತರ್ಜಲ–ಸಂಬಂಧಿತ ಸಮಸ್ಯೆಗಳು ಮತ್ತು ಅಂತರ್ಜಲ ನಿರ್ವಹಣೆ ಕುರಿತ 3ನೇ ಶ್ರೇಣಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಅಂತರ್ಜಲದ ಬಳಕೆಯ ಪ್ರಮಾಣ ಮಿತಿ ಮೀರುತ್ತಿದ್ದು, ಇದರಿಂದಾಗಿ ದೇಶದ ಅನೇಕ ಭಾಗಗಳಲ್ಲಿ ಅಂತರ್ಜಲದ ಲಭ್ಯತೆಯು ಕಡಿಮೆಯಾಗುತ್ತಿದೆ.

ಅಂತರ್ಜಲವು ನೆಲದೊಳಗೆ ಭೂಮಿಯ ಮೇಲ್ಪದರಗಳಲ್ಲಿ ಶಿಥಿಲಗೊಂಡ ಶಿಲಾರಚನೆಗಳಲ್ಲಿ ಹಾಗೂ ಆಳಭಾಗಗಳಲ್ಲಿ ಬಿರುಕು ಹಾಗೂ ಅಪಾಯದ ಪರಿಸ್ಥಿತಿಯನ್ನು ತಂದೊಡ್ಡಿದೆ. ಇದರೊಂದಿಗೆ ಹಲವಾರು ಸಮಸ್ಯೆಗಳೂ ನಮಗೆ ಎದುರಾಗಿವೆ ಎಂದರು. ಈ ವೇಳೆ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಂ.ಹನುಮಂತಪ್ಪ ಅವರು ಮಾತನಾಡಿ, ಅಂತರ್ಜಲ ಕುಸಿತದಿಂದ ಎದುರಾಗಿರುವ ಸಮಸ್ಯೆ ನೀಗಿಸಿ ನೀರಿನ ಗುಣಮಟ್ಟ, ನಿರ್ವಹಣೆ ಹಾಗೂ ಸದ್ಬಳಕೆ ಬಗ್ಗೆ ಕೃಷಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು



ಹೆಚ್ಚು ಒತ್ತು ನೀಡಬೇಕಾದ ಅನಿವಾರ್ಯತೆ ಇದೆ ಎಂದು ಸಲಹೆ ಮಾಡಿದರು.

ಮಳೆನೀರು ಕೊಯ್ಲು, ಅಂತರ್ಜಲ ಸಂರಕ್ಷಣೆ, ಕೃತಕ ಮರುಪೂರಣ ಮತ್ತು ಜವಾಬ್ದಾರಿಯುತ ನೀರಿನ ಬಳಕೆಯ ಬಗ್ಗೆ ಜಲ ವೃತ್ತಿಪರರು, ವಿದ್ಯಾರ್ಥಿಗಳು, ಸ್ಥಳೀಯ ಎನ್‌ಜಿಓಗಳು, ರೈತರು, ಪಂಚಾಯತ್ ಕಾರ್ಯಕರ್ತರು ಮತ್ತು ಯುವಕರಿಗೆ 3ನೇ ಶ್ರೇಣಿ ಕಾರ್ಯಕ್ರಮಗಳು ಮತ್ತು ರೈತರು ಮತ್ತು ಗ್ರಾಮೀಣ ಸಮುದಾಯಗಳಿಗೆ ಸಾರ್ವಜನಿಕ ಸಂವಹನ ಕಾರ್ಯಕ್ರಮಗಳು (ಪಿಐಪಿ) ಮತ್ತು ಸಾಮೂಹಿಕ ಜಾಗೃತಿ ಕಾರ್ಯಕ್ರಮಗಳು (ಎಂಎಪಿ) ನಂತಹ ವ್ಯಾಪಕವಾದ ತಳಮಟ್ಟದ ಚಟುವಟಿಕೆಗಳ ಮೂಲಕ, ಸಾವಿರಾರು ಪಾಲುದಾರರಿಗೆ ಅರಿವು ಮೂಡಿಸಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಕಾಲೇಜ್ ಆಫ್ ಅಗ್ರಿಕಲ್ಚರಲ್ ಎಂಜಿನಿಯರಿಂಗ್ ಡೀನ್ ಡಾ.ಎಂ.ಎಸ್. ಅಯ್ಯನಗೌಡರು, ವಿಜ್ಞಾನಿ ಡಾ.ಜೆ.ದವಿತುರಾಜ್, ಡಾ. ಎಂ.ಗೋಬಿನಾಥ, ಎನ್.ನರಸಿಂಹಲು, ಶರಣಗೌಡ ಹಿರೇಗೌಡ ಸೇರಿದಂತೆ ಇನ್ನಿತರರು ಮತ್ತು ವಿದ್ಯಾರ್ಥಿಗಳು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ. ಎಸ್ ಶಲ್ಯ ತಂತ್ರ (MS Shalya Tantra)

ಎಂ. ಎಸ್ ಶಲ್ಯ ತಂತ್ರ (MS Shalya Tantra) ಎಂದರೆ ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಸ್ನಾತಕೋತ್ತರ ಪದವಿ (Master of Surgery), ಇದು ಶಸ್ತ್ರಚಿಕಿತ್ಸಾ ವಿಧಾನಗಳು, ಗಾಯದ ನಿರ್ವಹಣೆ ಮತ್ತು ಚಿಕಿತ್ಸೆಗಳ ಕುರಿತು 3 ವರ್ಷಗಳ ಕೋರ್ಸ್ ಆಗಿದೆ, ಇದಕ್ಕೆ ಃಂಒಖ ಪದವಿ ಮತ್ತು ಪ್ರವೇಶ ಪರೀಕ್ಷೆ (AIAPGET/PG KCET) ಶಲ್ಯ ತಂತ್ರ (ಸಾಮನ್ಯ) ದಲ್ಲಿನ ಎಂಎಸ್ ವಿದ್ಯಾರ್ಥಿಗಳಿಗೆ ಆಧುನಿಕ ಶಸ್ತ್ರಚಿಕಿತ್ಸೆಯ ತತ್ವಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ವಿಭಾಗವು ಗುದನಾಳದ ಕಾಯಿಲೆಗಳು, ಗಾಯ ನಿರ್ವಹಣೆ, ಮೂತ್ರದ ಅಸ್ವಸ್ಥತೆಗಳು ಮತ್ತು ಮುರಿತ ಗುಣಪಡಿಸುವ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆಗಳನ್ನು ನೀಡಿದೆ. ಈ ಕೋರ್ಸ್ ಗ್ರಂಥಗಳಲ್ಲಿ ವಿವರಿಸಿದ ಪ್ರಾಚೀನ ಶಸ್ತ್ರಚಿಕಿತ್ಸಾ ವಿಧಾನಗಳ ಅಧ್ಯಯನ, ವಿವಿಧ ಚಿಕಿತ್ಸಾ ವಿಧಾನಗಳ ಕ್ಲಿನಿಕಲ್ ಮತ್ತು ಶಸ್ತ್ರಚಿಕಿತ್ಸಾ ಅನ್ವಯಿಕೆಗಳು, ಆಯುರ್ವೇದ ವಿಧಾನದ ಪ್ರಕಾರ ಪೈಲ್ಸ್ ಮತ್ತು ಫಿಸ್ಟುಲಾಗಳಿಗೆ ಯಶಸ್ವಿ ಚಿಕಿತ್ಸೆ, ಜಿಗಣೆಗಳ ಮೂಲಕ ರಕ್ತ ಬಿಡುವ ಮೂಲಕ ದೀರ್ಘಕಾಲದ ಕಾಯಿಲೆಗಳ ಚಿಕಿತ್ಸೆ ಮತ್ತು ಸುಸಜ್ಜಿತ ಶಸ್ತ್ರಚಿಕಿತ್ಸಾ ರಂಗಮಂದಿರ ಮತ್ತು ಕಾರ್ಯವಿಧಾನ ಕೊಠಡಿಯಲ್ಲಿ ರೋಗಿಗಳ ಮೇಲೆ ಶಸ್ತ್ರಚಿಕಿತ್ಸಾ ವಿಧಾನಗಳ ಪ್ರಾಯೋಗಿಕ ತರಬೇತಿಯನ್ನು ಒಳಗೊಂಡಿದೆ. ಇದು ಆಯುರ್ವೇದದ ಮಹತ್ವದ ಸಂಶೋಧನಾ ಶಾಖೆಯಾಗಿದೆ. ಅಗತ್ಯ. ಶಸ್ತ್ರಚಿಕಿತ್ಸೆ ಮತ್ತು ಸಂಬಂಧಿತ ಕಾರ್ಯವಿಧಾನಗಳ ಮೇಲೆ ಕೇಂದ್ರೀಕರಿಸಿದ ಆಯುರ್ವೇದ ಔಷಧದ ಶಾಖೆಯಾದ ಶಲ್ಯತಂತ್ರದಲ್ಲಿ ಸ್ನಾತಕೋತ್ತರ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳುವುದು ಹಲವಾರು ಕಾರಣಗಳಿಗಾಗಿ ಅಮೂಲ್ಯವಾದ ಆಯ್ಕೆಯಾಗಿದೆ: ವಿಶೇಷ ಪರಿಣತಿ: ಶಲ್ಯತಂತ್ರವು ಶಸ್ತ್ರಚಿಕಿತ್ಸಾ ತಂತ್ರಗಳು ಮತ್ತು ಕಾರ್ಯವಿಧಾನಗಳಲ್ಲಿ ವಿಶೇಷ ಜ್ಞಾನ ಮತ್ತು ಕೌಶಲ್ಯಗಳನ್ನು ನೀಡುತ್ತದೆ, ಇದು ನಿಮ್ಮನ್ನು ಆಯುರ್ವೇದದ ಈ ಕ್ಷೇತ್ರದಲ್ಲಿ ಪರಿಣಿತರನ್ನಾಗಿ ಮಾಡುತ್ತದೆ.ಹೆಚ್ಚುತ್ತಿರುವ ಬೇಡಿಕೆ: ಆಯುರ್ವೇದ ಶಸ್ತ್ರಚಿಕಿತ್ಸಾ ಚಿಕಿತ್ಸೆಗಳು ಮತ್ತು ಚಿಕಿತ್ಸೆಗಳಿಗೆ ಹೆಚ್ಚುತ್ತಿರುವ ಬೇಡಿಕೆ ಇದ್ದು, ಶಲ್ಯತಂತ್ರದಲ್ಲಿ ಪರಿಣತಿ ಹೊಂದಿರುವ ವೈದ್ಯರಿಗೆ ಅವಕಾಶಗಳನ್ನು ಸೃಷ್ಟಿಸುತ್ತಿದೆ. ,ಸಮಗ್ರ ವಿಧಾನ: ಶಲ್ಯತಂತ್ರ ಸೇರಿದಂತೆ ಆಯುರ್ವೇದವು ಆರೋಗ್ಯ ರಕ್ಷಣೆಗೆ ಸಮಗ್ರ ವಿಧಾನವನ್ನು ಅನುಸರಿಸುತ್ತದೆ, ಇದು ಸಮಗ್ರ, ರೋಗಿ-ಕೇಂದ್ರಿತ ಅಭ್ಯಾಸದಲ್ಲಿ ಆಸಕ್ತಿ ಹೊಂದಿರುವವರಿಗೆ ಆಕರ್ಷಕವಾಗಿರುತ್ತದೆ. , ಸಮಗ್ರ ಔಷಧ: ಅನೇಕ ರೋಗಿಗಳು ಸಮಗ್ರ ಆರೋಗ್ಯ ರಕ್ಷಣಾ ಆಯ್ಕೆಗಳನ್ನು ಹುಡುಕುತ್ತಾರೆ, ಶಲ್ಯತಂತ್ರದಂತಹ ಆಯುರ್ವೇದ ಪದ್ಧತಿಗಳನ್ನು ಆಧುನಿಕ ಔಷಧದೊಂದಿಗೆ ಸಂಯೋಜಿಸಿ ಉತ್ತಮ ವಿಧಾನಕ್ಕಾಗಿ ಪ್ರಯತ್ನಿಸುತ್ತಾರೆ., ಸಂಶೋಧನೆ ಮತ್ತು ನಾವೀನ್ಯತೆ: ಶಲ್ಯತಂತ್ರದಲ್ಲಿ ಸ್ನಾತಕೋತ್ತರ ಅಧ್ಯಯನಗಳು ಸಂಶೋಧನೆಯನ್ನು ಒಳಗೊಂಡಿರಬಹುದು, ಇದು ಆಯುರ್ವೇದ ಶಸ್ತ್ರಚಿಕಿತ್ಸಾ ಪದ್ಧತಿಗಳ ಪ್ರಗತಿ ಮತ್ತು ಆಧುನೀಕರಣಕ್ಕೆ ಕೊಡುಗೆ ನೀಡುತ್ತದೆ., ವೈಯಕ್ತಿಕ ತೃಪ್ತಿ: ನೀವು ಆಯುರ್ವೇದ ಔಷಧ ಮತ್ತು ಶಸ್ತ್ರಚಿಕಿತ್ಸಾ ತಂತ್ರಗಳಲ್ಲಿ ಉತ್ಸಾಹ ಹೊಂದಿದ್ದರೆ, ಶಲ್ಯತಂತ್ರವನ್ನು ಅನುಸರಿಸುವುದು ವೈಯಕ್ತಿಕವಾಗಿ ತೃಪ್ತಿಕರ ಮತ್ತು ತೃಪ್ತಿಕರವಾಗಿರುತ್ತದೆ. ಸಂಸ್ಕೃತ ಆಯುರ್ವೇದ ವೈದ್ಯಕೀಯ ಕಾಲೇಜು ಸ್ನಾತಕೋತ್ತರ ಪದವಿ ಆಕಾಂಕ್ಷಿಗಳಿಗೆ ಅತ್ಯುತ್ತಮ ಕಲಿಕಾ ವಾತಾವರಣವನ್ನು ನೀಡುತ್ತದೆ. ಅನೋರೆಕ್ಟಲ್ (ಗುದ ಮತ್ತು ಗುದದ್ವಾರದ) ಅಂಗರಚನಾಶಾಸ್ತ್ರ ಮತ್ತು ರೋಗಶಾಸ್ತ್ರ: ಗುದ ಮತ್ತು ಗುದದ್ವಾರದ ರಚನೆ, ರೋಗಗಳ ಬಗ್ಗೆ ಸಮಗ್ರ ಜ್ಞಾನ. ಕ್ಷರಕರ್ಮ ಮತ್ತು ಕ್ಷರಸೂತ್ರ: ಕ್ಷಾರ (ಕ್ಷಾರ ದ್ರಾವಣ) ಮತ್ತು ಕ್ಷರಸೂತ್ರ (ದಾರದ ಚಿಕಿತ್ಸೆ) ಬಳಸಿ ಚಿಕಿತ್ಸೆ ನೀಡುವ ವಿಧಾನಗಳು., ಶಸ್ತ್ರ ಮತ್ತು ಕ್ಷಾರಗಳ ಬಳಕೆ: ವಿವಿಧ ರೀತಿಯ ಶಸ್ತ್ರಗಳು (ಕತ್ತರಿ, ಚಾಕುಗಳು) ಮತ್ತು ಕ್ಷಾರಗಳನ್ನು ತಯಾರಿಸಿ ಬಳಸುವ ಕೌಶಲ್ಯ., ಶಸ್ತ್ರಚಿಕಿತ್ಸಾ ತಂತ್ರಗಳು: ಆಯುರ್ವೇದದ ತತ್ವಗಳ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಮಾಡುವ ವಿಧಾನಗಳು. ಆಯುರ್ವೇದ ಔಷಧ ವೈದ್ಯರ ಭವಿಷ್ಯ ಆಯುರ್ವೇದವು ಶಲ್ಯ ತಂತ್ರ ಕಾರ್ಯಕ್ರಮದ ಕೇಂದ್ರಬಿಂದುವಾಗಿದೆ. ವಿದ್ಯಾರ್ಥಿಗಳು ಉಪನ್ಯಾಸಗಳು ಮತ್ತು ಪ್ರಾಯೋಗಿಕ ಜ್ಞಾನದ ಮೂಲಕ ರೋಗಶಾಸ್ತ್ರೀಯ ಪರಿಸ್ಥಿತಿಗಳು ಮತ್ತು ಮಾರ್ಗಗಳ ಬಗ್ಗೆ ಜ್ಞಾನವನ್ನು ಪಡೆಯುತ್ತಾರೆ. ಬೋಧನೆಯಲ್ಲಿ, ಆಯುರ್ವೇದ ಪುಸ್ತಕಗಳನ್ನು ಬಳಸಲಾಗುತ್ತದೆ ಮತ್ತು ನಿರ್ದೇಶನದ ಉಲ್ಲೇಖಗಳನ್ನು ನೀಡಲಾಗುತ್ತದೆ. ಆಯುರ್ವೇದ ವ್ಯವಸ್ಥೆಯ ಬಗ್ಗೆ ಪರಿಚಿತ ಮತ್ತು ಮಾಹಿತಿ ಹೊಂದಿರುವ ವೈದ್ಯರಿಗೆ ತರಬೇತಿ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಅರ್ಜಿದಾರರು ಆನ್‌ಲೈನ್ ಮತ್ತು ವೈಯಕ್ತಿಕವಾಗಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಎಂದರೆ ಆಕಾಂಕ್ಷಿಗಳು ಓಇಇಖ ಅಧಿಕೃತ ವೆಬ್‌ಸೈಟ್ ಮತ್ತು ವಿಶ್ವವಿದ್ಯಾಲಯದ ಅಧಿಕೃತ ಸೈಟ್‌ಗೆ ಭೇಟಿ ನೀಡಿ ಅಗತ್ಯ ದಾಖಲಾತಿಗಳನ್ನು ಪೋರ್ಟಲ್‌ನಲ್ಲಿ ಪ್ರಕಟಿಸಬೇಕು. ಶಿಕ್ಷಕರು ಒಖ Shalakya Tantra ಕಾಲೇಜುಗಳ ಪ್ರವೇಶ ಕಚೇರಿಗೆ ಭೇಟಿ ನೀಡಿ ಆಫ್‌ಲೈನ್ ಆಯ್ಕೆಗಾಗಿ ಅಭ್ಯರ್ಥಿಗಳಿಗೆ ಎಲ್ಲಾ ದಾಖಲೆಗಳನ್ನು ಹಸ್ತಾಂತರಿಸಬೇಕಾಗುತ್ತದೆ. ಇಲ್ಲಿ ಸಾಮಾನ್ಯ ಪ್ರವೇಶ ಪ್ರಕ್ರಿಯೆಯ ವಿವರಗಳಿವೆ.

ಅರ್ಜಿದಾರರು ತಮ್ಮ ಆಯ್ಕೆಯ ಕಾಲೇಜಿಗೆ ಪ್ರವೇಶ ಪಡೆಯಲು ಎಂಎಸ್ ಶಲಾಕ್ಯ ತಂತ್ರ ಪಠ್ಯಕ್ರಮದ ವಿವರಗಳನ್ನು ತಿಳಿದಿರಬೇಕು . ಅರ್ಜಿ ನಮೂನೆಯನ್ನು ಪೂರ್ಣಗೊಳಿಸಿದ ನಂತರ, ಅರ್ಜಿದಾರರು ತಮ್ಮ ಆಯ್ಕೆಯ ಕಾಲೇಜಿಗೆ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಎಂಎಸ್ ಶಲಾಕ್ಯ ತಂತ್ರ ಶುಲ್ಕವನ್ನು ಪಾವತಿಸಬೇಕು.

# ಕುಷ್ಟಗಿ ಮುಖ್ಯ ರಸ್ತೆ ಬಸವ ವೃತ್ತದ ಬಳಿ ತಗ್ಗು-ದಿಣ್ಣೆ ಸರಿಪಡಿಸದಿದ್ದರೆ ಉಗ್ರ ಹೋರಾಟ: ಕೆ.ರಾಜಶೇಖರ

❑ ನೈಜ್ಯ ದೆಸೆ ನ್ಯೂಸ್

**ನಗರದ ಬಸವೇಶ್ವರ ವೃತ್ತದ ಹತ್ತಿರವಿರುವ ಹಟ್ಟಿ ರಸ್ತೆಗೆ ಅಥವಾ ಜೈನ್ ಕಲ್ಯಾಣ ಮಂಟಪಕ್ಕೆ ಸಂಪರ್ಕಿಸುವ ಕುಷ್ಟಗಿ ಮುಖ್ಯ ರಸ್ತೆಯಲ್ಲಿ ಕಳೆದ ಏಳೆಂಟು ತಿಂಗಳ ಹಿಂದೆ ಯುಜಿಡಿ ಕಾಮಗಾರಿಗಾಗಿ ತೋಡಿದ ಗುಂಡಿ ಸರಿಯಾಗಿ ಮುಚ್ಚದೆ, ಬರಿ ಮಣ್ಣು ಹಾಕಿ ಬಿಟ್ಟಿದ್ದಾರೆ. ಇದುವರೆಗೂ ಕೂಡ ಈ ರಸ್ತೆ ರಿಪೇರಿ ಮಾಡುತ್ತಿಲ್ಲ. ಇದನ್ನು ದುರಸ್ತಿ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ನಗರಸಭೆ ಮುಂದೆ ಹೋರಾಟ ನಡೆಸಲಾಗುವುದು ಎಂದು ನಗರಸಭೆ ಸದಸ್ಯ ರಾಜಶೇಖರ ಕೆ ಹೇಳಿದರು.**

ನಗರದ ಬಸವ ಸರ್ಕಲ್ ಹತ್ತಿರದ ಕುಷ್ಟಗಿ ಮುಖ್ಯ ರಸ್ತೆಯಲ್ಲಿ ಬಿದ್ದಿರುವ ತಗ್ಗು ದಿಣ್ಣೆಯನ್ನು ಉದ್ದೇಶಿಸಿ ಬಿಜೆಪಿ ಪಕ್ಷದಿಂದ ಪ್ರತಿಭಟಿಸಿ ಮಾತನಾಡಿದರು. ನಂತರ ನಗರ ಘಟಕದ ಅಧ್ಯಕ್ಷ ಸಿದ್ರಾಮೇಶ ಮನ್ನಾಪೂರು ಮಾತನಾಡಿ, ಈಗಾಗಲೇ ಅನೇಕ



ಸಾರಿ ಮಾಧ್ಯಮದವರ ಗಮನಕ್ಕೆ ತಂದು ಪತ್ರಿಕೆಗಳಲ್ಲಿ ವರದಿ ಪ್ರಕಟವಾದರೂ ಕೂಡ ಇಲ್ಲಿಯವರೆಗೆ ಯಾವ ಇಲಾಖೆ ಅಧಿಕಾರಿಗಳು ಈ ರಸ್ತೆ ದುರಸ್ತಿಗೆ ಮುಂದಾಗುತ್ತಿಲ್ಲ. ಈ ಗುಂಡಿ ಬಿದ್ದಿರುವ ಜಾಗದಲ್ಲಿ ಕ್ರಾಸಿಂಗ್ ಇದೆ. ಹೀಗಾಗಿ ಪ್ರತಿನಿತ್ಯ ಬಹಳಷ್ಟು ಅಪಘಾತಗಳು ಆಗುತ್ತಿವೆ. ಶಾಲೆ ಮಕ್ಕಳಿಂದ ಹಿಡಿದು, ಪ್ರತಿಯೊಬ್ಬ ವಾಹನ ಸವಾರರಿಗೆ, ಸಾರ್ವಜನಿಕರಿಗೆ, ತೊಂದರೆಯಾಗುತ್ತಿದೆ.

ಈ ಬಸವೇಶ್ವರ ವೃತ್ತದ ಸುತ್ತಲೂ ತರಕಾರಿ ಮಾರಕೇಟ್, ದಿನಸಿ ಅಂಗಡಿಗಳ ಮಾರಕೇಟ್ ಇರುವುದರಿಂದ ಜನಸಂದಣಿ ಬಹಳವಿದೆ. ಯುಜಿಡಿ ಅಧಿಕಾರಿಗಳಿಗೆ ಹೇಳಿದರೆ, ನಗರಸಭೆಗೆ ಸಂಬಂಧಿಸಿದ್ದು ಅನ್ನುತ್ತಿದ್ದಾರೆ. ನಗರಸಭೆಯವರಿಗೆ ಕೇಳಿದರೆ, ಪಿಡಬ್ಲ್ಯೂಡಿಯವರ ಮೇಲೆ ಹೇಳುತ್ತಿದ್ದಾರೆ, ಹಾಗಾದರೆ ಈ ರಸ್ತೆ ದುರಸ್ತಿ ಯಾರು ಮಾಡಬೇಕು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಒಬ್ಬರ ಮೇಲೊಬ್ಬರು ಹಾರಿಕೆ ಉತ್ತರ ಕೊಟ್ಟರೆ ಸಾರ್ವಜನಿಕರ ಪಾಡೇನು ಇನ್ನೂ ಎರಡು ದಿನದೊಳಗಾಗಿ ಸಂಪೂರ್ಣ ರಸ್ತೆ ದುರಸ್ತಿ ಮಾಡಿ, ಡಾಂಬರಿಕರಣ ಅಥವಾ ಸಿಸಿ ರಸ್ತೆ ಮಾಡಲೇಬೇಕು.

ಅಕಸ್ಮಾತ್ ಅಧಿಕಾರಿಗಳು ಮುತುವರ್ಜಿ ವಹಿಸದಿದ್ದರೆ, ನಿರ್ಲಕ್ಷ್ಯ ಮಾಡಿದರೆ ಮುಂದಿನ ದಿನಗಳಲ್ಲಿ ಭಾರತೀಯ ಜನತಾ ಪಕ್ಷದಿಂದ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ: ಫಕೀರಪ್ಪ ತಿಡಿಗೋಳ, ಜಗದೀಶ ಕೆ, ಶರಣಪ್ಪ ದುಮತಿ, ರಮೇಶ ಮಾಡಸಿರವಾರ, ಮೌನೇಶ ಹೊಸಮನಿ, ಬೀರಪ್ಪ, ನಾಗರಾಜ ದೇವರಗುಡಿ, ಕಾಶಿನಾಥ, ರಮೇಶ ಮಡಿವಾಳ, ಮುತ್ತುಬರ್ಸಿ, ಸೇರಿದಂತೆ ಅನೇಕರಿದ್ದರು.

# 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಸಾಧಕರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಇದೆ ಡಿ. 20, 21ರಂದು ಎರಡು ದಿನಗಳ ಕಾಲ ರಾಯಚೂರಿನ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ನಡೆಯಲಿದೆ.**

ಎಂದು ಸಿಂಧನೂರು ತಾಲೂಕು ದಲಿತ ಸಾಹಿತ್ಯ ಪರಿಷತ್ತ ಅಧ್ಯಕ್ಷ ಹಾಗೂ ಸಮ್ಮೇಳನದ ಸಂಯೋಜಕ ಡಾ. ಹುಸೇನಪ್ಪ ಅಮರಾಪುರ ಹಾಗೂ ಪ್ರಧಾನ ಕಾರ್ಯದರ್ಶಿ ರಾಮಣ್ಣ ಹಿರೇಬೇರ್ಗಿ ರವರು ಜಂಟಿ ಸುದ್ದಿ ಗೋಷ್ಠಿ ಯಲ್ಲಿ ಮಾತನಾಡಿದ ಅವರು, ದಲಿತ ಸಾಹಿತ್ಯ ಸಿರಿ ರಾಷ್ಟ್ರೀಯ ಪ್ರಶಸ್ತಿಗೆ



ಹಿರಿಯ ಕವಿ ಹಾಗೂ ಹೋರಾಟಗಾರ ನರಸಿಂಹಪ್ಪ ರಾಮತ್ನಾಳ, ರಾಷ್ಟ್ರೀಯ ಪುಸ್ತಕ ಪ್ರಶಸ್ತಿಗೆ ಕಥೆಗಾರ ಅಮರೇಶ ಗಿಣಿವಾರ ಅವರ ಪೋಸ್ಟ್ ಆಫೀಸನಲ್ಲಿ ಅಕ್ಕನ ಜಡ್ಜಮೆಂಟ್ ಗಳು ಪ್ರಬಂಧ ಕೃತಿ ಆಯ್ಕೆಯಾಗಿರುತ್ತದೆ. ಸಮ್ಮೇಳನದ ಕವಿಗೋಷ್ಠಿಗೆ ಡಾ.ಶರೀಫ್ ಹಸಮಕಲ್, ದುರ್ಗಪ್ಪ ಗುಡದೂರು ಮತ್ತು ವೆಂಕಟೇಶ್ ಬಕ್ಕನಟ್ಟಿ ಮೂರು ಜನ ಕವಿಗಳು ಆಯ್ಕೆಯಾಗಿರುತ್ತಾರೆ.

ಸಾಧಕರ ಸನ್ಮಾನಕ್ಕೆ ಅಂತರಾಷ್ಟ್ರೀಯ ಒಂಟಿ ಕೈ ಕ್ರಿಕೆಟ್ ಆಟಗಾರ ಸಣ್ಣ ಮಾರೇಶ ಅರಳಹಳ್ಳಿ, ಎಂಬಿಬಿಎಸ್ ಪದವೀಧರ ಡಾ. ಗಣೇಶ್ ಕುಮಾರ ಮುನಿಸ್ವಾಮಿ, ತತ್ವಪದಕಾರ ಹಾಗೂ ನಾರಾಯಣಪ್ಪ ಮಾಡಸಿರವಾರ, ದಲಿತ ಮುಖಂಡ ಮಂಜುನಾಥ ಗಾಂಧಿನಗರ, ಹೋರಾಟಗಾರರಾದ ಬಿ.ಎನ್ ಯರದಿಹಾಳ, ಚಿತ್ರಕಲಾವಿದ ಡಾ.ಮಲ್ಲಿಕಾರ್ಜುನ ಕಮತಗಿ, ಉನ್ನತ ಶಿಕ್ಷಣವನ್ನು ಪಡೆದ ಡಾ. ಲಕ್ಷ್ಮಣ ಅಮರಾಪುರ, ಡಾ.ರಾಮಕೃಷ್ಣ ಭಂಡಾರಿ ಡಾ.ಶಾಮಣ್ಣ ಚಿಕ್ಕಭೇರಿಗಿ ಮೊದಲಾದವರು ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ ಆಗಿದೆ ಎಂದರು. ಸಿಂಧನೂರಿನಿಂದ ಸಮ್ಮೇಳನಕ್ಕೆ ನೂರಕ್ಕಿಂತ ಅಧಿಕ ಜನ ಸಾಹಿತಿಗಳು, ಹೋರಾಟಗಾರರು, ಪ್ರಗತಿಪರ ಚಿಂತಕರು, ಬುದ್ದಿಜೀವಿಗಳು ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಒಪ್ಪುವವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

# ಡಿ.14 ರಂದು ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿ ಲೋಕಾರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಗ್ಯಾಲಾಕ್ಸಿ ಮೀಟಿಂಗ್ ಹಾಲ್ ಪಿ.ಹೆಚ್ ,ಕಾಲೇನಿಯಲ್ಲಿ ಸುವರ್ಣಗಿರಿ ಪ್ರಕಾಶನ ಮನ್ವಿ ರವರ ಪ್ರಕಾಶನದಲ್ಲಿ ಡಾ.ಚಂದ್ರಶೇಖರ ಸುವರ್ಣಗಿರಿ ಮಠ ರವರು ರಚಿಸಿದ ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿಯನ್ನು ಡಿ.14 ರಂದು ಬೆ.10ಕ್ಕೆ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಮಹಾಂತೇಶ ಮಸ್ಕಿ ಲೋಕಾರ್ಪಣೆ ಗೊಳಿಸಲಿದ್ದಾರೆ.**

ದಿವ್ಯಸಾನಿಧ್ಯವನ್ನು ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ




ಮಹಾಸ್ವಾಮಿಗಳು, ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಸದಾಶಿವ ಮಹಾಸ್ವಾಮಿಗಳು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷರಾದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ವಹಿಸಲಿದ್ದಾರೆ.

ಕೃತಿಯ ಕುರಿತು ಪರಿಚಾಯವನ್ನು ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಮಾಡಲಿದ್ದಾರೆ. ಡಾ.ಶವಶರಣಪ್ಪ ಇತ್ಲಿ, ಗಿರೆಯ್ಯಪಾಟೀಲ್ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ಕಸಾಪ ಗೌ.ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು, ತಾ.ಅಧ್ಯಕ್ಷರಾದ ಶರಣಬಸವ ನೀರಾಮಾನ್ವಿ, ಕೃತಿಯಲೇಖಕರಾದ ಡಾ.ಚಂದ್ರಶೇಖರ ಸುವರ್ಣಗಿರಿ ಮಠ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದುಸುವರ್ಣಗಿರಿ ಪ್ರಕಾಶನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ದುಶ್ಚಟ ತೊರೆದರೆ ಬದುಕು ಹಸನ, ಡಿವೈಎಸ್ಪಿ ಜಿ.ಚಂದ್ರಶೇಖರ ಅಭಿಮತ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಯುವ ಸಮೂಹವು ದುಶ್ಚಟಗಳಿಗೆ ಬಲಿಯಾಗದೆ ಜ್ಞಾನದ ಮಾರ್ಗದ ಕಡೆಗೆ ಮುನ್ನಡೆದರೆ ಬದುಕು ಹಸನಾಗಲಿದೆ ಎಂದು ಡಿವೈಎಸ್ಪಿ ಜಿ.ಚಂದ್ರಶೇಖರ ಹೇಳಿದರು. ನಗರದ ವಿ.ಸಿ.ಬಿ ಪದವಿ ಪೂರ್ವ ಹಾಗು ನ್ಯಾಷನಲ್ ಪದವಿ ಮಹಾವಿದ್ಯಾಲಯದಲ್ಲಿ ಜಿಲ್ಲಾ ಪೊಲೀಸ್, ಪೊಲೀಸ್ ಉಪಾಧೀಕ್ಷಕರ ಕಚೇರಿ ಸಿಂಧನೂರು ಇವರ ಸಹಯೋಗದಲ್ಲಿ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಬುಧವಾರ ನಡೆದ ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಾಧ್ಯವೇ ವಿಷಯದ ಕುರಿತು ಚರ್ಚಾ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.**

ಮಾದಕ ವ್ಯಸನವ ಯುವಜನತೆಗೆ ಮಾರಕವಾಗಿದೆ. ಜ್ಞಾನಿಗಳಾಗುವುದು ಮತ್ತು ದುಶ್ಚಟದಿಂದ ದೂರವಿರುವುದು ಮಾತ್ರ ವ್ಯಕ್ತಿಯ ಅಭಿವೃದ್ಧಿಗೆ ಪೂರಕವಾಗಲಿದೆ ಎಂದರು. ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಾಧ್ಯವೇ ವಿಷಯವಾಗಿ ಪರ ಹಾಗು ವಿರೋಧದ ಕುರಿತಾಗಿ ಗಂಟೆಗೂ ಅಧಿಕ ಕಾಲ ನಡೆದ ಚರ್ಚೆಯನ್ನು ಡಿವೈಎಸ್ಪಿ ಜಿ.ಚಂದ್ರಶೇಖರ ಹಾಗು ಸಿಪಿಐ ವೀರಾರೆಡ್ಡಿ ವೀಕ್ಷಿಸಿದರು. ಡಿ.12 ರಂದು ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ ಅವರಿಂದ ನಗದು ಬಹುಮಾನ ವಿತರಿಸಲಾಗುವುದು ಎಂದು ತಿಳಿಸಿದರು.

ನಗರ ಪೊಲೀಸ ಠಾಣೆ ಸಿಪಿಐ ವೀರಾರೆಡ್ಡಿ ಮಾತನಾಡಿ, ಸೈಬರ್ ಅಪರಾಧ, ಅಕ್ರಮ ಚಟುವಟಿಕೆಗಳ ಕುರಿತಂತೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಮೊಬೈಲ್ ಬಳಕೆ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರಬೇಕು. ನಿಯಮಬಾಹಿರ ಚಟುವಟಿಕೆಗಳು ಕಂಡುಬಂದರೆ ಪೊಲೀಸ ಇಲಾಖೆ ಗಮನಕ್ಕೆ ತರಬೇಕು ಎಂದರು. ಪಾಟೀಲ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್.ಸಿ.ಪಾಟೀಲ್ ಮಾತನಾಡಿ, ದುಶ್ಚಟದಿಂದ ದೂರವಿರದಿದ್ದರೆ, ನಿಧಾನವಾಗಿ ಚಟಗಳೇ ಜೀವಕ್ಕೆ ಆಪತ್ತು ತರಲಿವೆ. ವಿದ್ಯಾರ್ಥಿ ಯುವಜನತೆ ಬಹಳ ಎಚ್ಚರಿಕೆಯಿಂದ ಇರಬೇಕು ಎಂದರು. ವೇದಿಕೆ ಮೇಲೆ ವಿ.ಸಿ.ಬಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಅಶೋಕ ಬೆನ್ನೂರು, ಉಪಾಧ್ಯಕ್ಷ ಚಂದ್ರಶೇಖರ ಬೆನ್ನೂರು, ಪ್ರಾಚಾರ್ಯರಾದ ರಾಮಲಿಂಗಯ್ಯ ಹೆಚ್., ನಾಗರಾಜ ಪತ್ತಾರ, ವಿಜಯಕುಮಾರ ನಾಡಗೌಡ ಇದ್ದರು.

# ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರ ಹುದ್ದೆಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಅಶೋಕ್ ಪ್ರಕಟಣೆಯಲ್ಲಿ ತಿಳಿಸಿದರು.**

ಉಮಲೂಟಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಬುಕ್ಕನಹಟ್ಟಿ -2 ಅಂಗನವಾಡಿ ಕೇಂದ್ರದ ಅಂಗನವಾಡಿ ಕಾರ್ಯಕರ್ತೆ 01 ಹುದ್ದೆ ಮೀಸಲಾತಿ ಇತರೆ ಇದ್ದು ಮತ್ತು ಗೊರಲೋಟಿ ಅಂಗನವಾಡಿ ಕೇಂದ್ರದ ಅಂಗನವಾಡಿ ಕಾರ್ಯಕರ್ತೆ 01 ಹುದ್ದೆ ಮೀಸಲಾತಿ ಪರಿಶಿಷ್ಟ ಪಂಗಡ ಇದ್ದು ಹಾಗೂ ಬುಕ್ಕನಹಟ್ಟಿ -1 ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಪರಿಶಿಷ್ಟ ಜಾತಿ ಇದ್ದು ಹಾಗೂ ಮುದೇನೂರು ಕ್ಯಾಂಪ್ ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಪರಿಶಿಷ್ಟ ಪಂಗಡ ಇದ್ದು ತಿಡಿಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ (ಕುರುಕುಂದ) ಗುಡದಮ್ಮ ಕ್ಯಾಂಪ್ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆಗೆ ಮೀಸಲಾತಿ ಪ.ಜಾತಿ ಇದ್ದು. ಮತ್ತು ನೀಡಿಗೋಳ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆಗೆ ಮೀಸಲಾತಿ ಇತರೆ ಇದ್ದು. ಗುಂಜಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗುಂಜಳ್ಳಿ -1 ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಇತರೆ.



ಬೂತಲದಿನ್ನಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ತಗ್ಗಿನ ಕ್ಯಾಂಪ್ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಇತರೆ ಇದ್ದು. ಜಾಲಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೆ ಹಂಚಿನಾಳ - 1 ಕೇಂದ್ರದ ಅಂಗನವಾಡಿ ಸಹಾಯಕಿ 01ಹುದ್ದೆ ಮೀಸಲಾತಿ ಪರಿಶಿಷ್ಟಜಾತಿ ಇದ್ದು. ಗುಡದೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮೆರನಾಳ -1 ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಇತರೆ ಹಾಗೂ ಗೋನಾಳ್ -1 ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಇತರೆ. ಗೊರೇಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೆ ಹಂಚಿನಾಳ ಕ್ಯಾಂಪ್-6 ಕೇಂದ್ರದ ಅಂಗನವಾಡಿ ಸಹಾಯಕಿ 01ಹುದ್ದೆ ಮೀಸಲಾತಿ ಇತರೆ.

ಗುಂಡ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗುಂಡ -1 ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಪರಿಶಿಷ್ಟ ಜಾತಿ ಮತ್ತು ಗುಂಡ -3 ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಇತರೆ ಮತ್ತು ಬೋಗಾಪೂರ ಕ್ಯಾಂಪ್ ಕೇಂದ್ರದ ಅಂಗನವಾಡಿ ಸಹಾಯಕಿ 01 ಹುದ್ದೆ ಮೀಸಲಾತಿ ಪರಿಶಿಷ್ಟ ಪಂಗಡ ಇದ್ದು. ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನೆ ಯಡಿ ಅಂಗನವಾಡಿ ಕೇಂದ್ರಗಳಲ್ಲಿರುವ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ,ಸಹಾಯಕಿಂಯರ ಹುದ್ದೆಗಳಿಗೆ ಆನ್ ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು 08-12- 2025 ರಿಂದ 07-01-2026 ರವರೆಗೆ ಕಾಲಾವಕಾಶ ನೀಡಲಾಗಿದೆ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿಯೋಜನಾಧಿಕಾರಿಗಳ ಕಛೇರಿ ಸಂಪರ್ಕಿಸಿ ಎಂದು ತಿಳಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101